ಮಾನ್ಯ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಪ್ರೇಮಾ ಮಹಾಲಿಂಗಪ್ಪನವರ ಅಧ್ಯಕ್ಷತೆಯಲ್ಲಿ ದಿನಾಂಕ 28-12-2012ರಂದು ಬೆಳಗ್ಗೆ 11.00 ಗಂಟೆಗೆ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ಸಾಮಾನ್ಯ ಸಭೆಯ ನಡವಳಿಗಳು :

*******

**ಹಾಜರಿ : ಹಾಜರಾತಿ ವಹಿಯಲ್ಲಿದ್ದಂತೆ.**

*********

ಸಭೆಯ ಆರಂಭದಲ್ಲಿ ಸಭೆಯ ಮಾನ್ಯ ಅಧ್ಯಕ್ಷರು, ಉಪಾಧ್ಯಕ್ಷರು, ಶಾಸಕರು, ಜಿಲ್ಲಾ ಪಂಚಾಯತ್ ಸದಸ್ಯರುಗಳು, ತಾಲ್ಲೂಕು ಪಂಚಾಯತ್ ಅಧ್ಯಕ್ಷರುಗಳು, ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಜಿಲ್ಲಾ/ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಗೂ ಪತ್ರಿಕಾ ಮಾಧ್ಯಮ ದವರುಗಳನ್ನು ಉಪ ಕಾರ್ಯದರ್ಶಿ(ಆಡಳಿತ), ಜಿಲ್ಲಾ ಪಂಚಾಯತ್, ತುಮಕೂರು ಇವರು ಸಭೆಗೆ ಹೃತ್ಪೂರ್ವಕವಾಗಿ ಸ್ವಾಗತಿಸಿ, ಮಾನ್ಯ ಅಧ್ಯಕ್ಷರು ಸಭೆಯ ಕಾರ್ಯಕಲಾಪಗಳನ್ನು ನಡೆಸಿಕೊಡಬೇಕೆಂದು ವಿನಂತಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮತ್ತೊಮ್ಮೆ ಎಲ್ಲರನ್ನೂ ಸಭೆಗೆ ಸ್ವಾಗತಿಸಿ ಮಾತನಾಡಿ, ಇತ್ತೀಚೆಗೆ ನಿಧನರಾದ ಮಾಜಿ ಪ್ರಧಾನಮಂತ್ರಿಗಳಾದ ಸನ್ಮಾನ್ಯ ಶ್ರೀ ಐ.ಕೆ.ಗುಜ್ರಾಲ್ ರವರ ಗೌರವಾರ್ಥ ಒಂದು ನಿಮಿಷ ಮೌನಾಚರಣೆ ಮಾಡೋಣವೆಂದು ತಿಳಿಸಿದಾಗ ಸಭೆಯಲ್ಲಿ ಎರಡು ನಿಮಿಷ ಮೌನಾಚರಣೆ ಮಾಡಲಾಯಿತು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀಮತಿ ಶಾಂತಲಾ ರಾಜಣ್ಣನವರು ಮಾತನಾಡಿ, ಈ ದಿನದ ಸಭೆಯು ಬೆಳಗ್ಗೆ 11.00 ಗಂಟೆಗೆ ನಿಗಧಿಯಾಗಿದ್ದು, ನಿಗಧಿತ ಸಮಯಕ್ಕೆ ಪ್ರಾರಂಭವಾಗದೇ ಸುಮಾರು ಒಂದು ಗಂಟೆ ತಡವಾಗಿ ಪ್ರಾರಂಭವಾಗಿದೆ, ಮಾನ್ಯ ಸದಸ್ಯರುಗಳು ಒಂದು ಗಂಟೆಯಿಂದ ಕಾಯುತ್ತಾ ಕುಳಿತಿದ್ದಾರೆ. ನಿಗಧಿತ ಸಮಯಕ್ಕೆ ಸಭೆ ಪ್ರಾರಂಭವಾಗದಿರಲು ಕಾರಣವಾದರೂ ಏನು? ಎಂದು ಪ್ರಶ್ನಿಸಿದರು. ಇದಕ್ಕೆ ಹಲವಾರು ಸದಸ್ಯರುಗಳು ಹಾಗೂ ಕುಣಿಗಲ್ ಕ್ಷೇತ್ರದ ಮಾನ್ಯ ಶಾಸಕರು ದನಿಗೂಡಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ವೈ.ಹೆಚ್. ಹುಚ್ಚಯ್ಯನವರು ಮಾತನಾಡಿ, ಮಾನ್ಯ ಅಧ್ಯಕ್ಷರು ಕೆಲವು ಆಡಳಿತಾತ್ಮಕ ವಿಚಾರಗಳ ಬಗ್ಗೆ ಮಾತನಾಡುತ್ತಿದ್ದುದ್ದರಿಂದ ಸಭೆಯು ಒಂದು ಗಂಟೆಗಳ ಕಾಲ ತಡವಾಗಿ ಪ್ರಾರಂಭವಾಗಿದೆ ಎಂದು ತಿಳಿಸಿದರು, ಕೆಲವೊಮ್ಮೆ ಅರ್ಧ ಗಂಟೆ ತಡವಾಗುತ್ತದೆ ಎಂದು ಮಾನ್ಯ ಸದಸ್ಯರಾದ ಬಡೀರಣ್ಣನವರು ಸಭೆಯಲ್ಲಿ ಬಿನ್ನವಿಸಿಕೊಂಡರು.

ನಂತರ ಸಭೆಯ ಮಾನ್ಯ ಅಧ್ಯಕ್ಷರು ವಿಷಯ ಸೂಚಿಯ ಪ್ರಕಾರ ಸಭೆಯನ್ನು ಪ್ರಾರಂಭಿಸಿದರು.

**1. ಜಿಲ್ಲಾ ಪಂಚಾಯತ್‌ನ ವಿವಿಧ ಸ್ಥಾಯಿ ಸಮಿತಿಗಳ ನಿರ್ಣಯಗಳನ್ನು ಅನುಮೋದಿಸುವ ಬಗ್ಗೆ:-**

**ಎ. ದಿನಾಂಕ 27-11-2012ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು:**

ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, ದಿನಾಂಕ 27-11-2012 ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಕೆಂಚಮಾರಯ್ಯನವರು ಮಾತನಾಡಿ, ಕಳೆದ ವರ್ಷದ ಬೆಳೆ ವಿಮೆಯ ಹಣವನ್ನು ಇನ್ನೂ ರೈತರಿಗೆ ವಿತರಿಸಿಲ್ಲ, ಅಲ್ಲದೆ ಈ ವರ್ಷದ ಬೆಳೆ ನಷ್ಟದ ಮಾಹಿತಿ ನೀಡಿಲ್ಲ, ಕೃಷಿ ಯಾಂತ್ರೀಕರಣ ಯೋಜನೆಯಲ್ಲಿ ಕೇವಲ ರೂ. 6.00 ಲಕ್ಷಗಳನ್ನು ಬಳಕೆ ಮಾಡಲಾಗಿದೆ, ಉಳಿದ ರೂ.23.00 ಲಕ್ಷಗಳನ್ನು ಬಳಕೆ ಮಾಡುವುದು ಯಾವಾಗ? ಎಂದು ಪ್ರಶ್ನಿಸಿದರು. ಕೃಷಿ ಪರಿಕರಗಳು ಕಳಪೆ ಗುಣಮಟ್ಟದಿಂದ ಕೂಡಿದೆ, ಇಲಾಖೆಯಿಂದ ವಿಶೇಷ ಘಟಕ ಯೋಜನೆಯಡಿ ಖರೀದಿಸಿದ ಪವರ್ ಟಿಲ್ಲರ್ ಸೇರಿದಂತೆ ಇತರೆ ಉಪಕರಣಗಳು ಫಲಾನುಭವಿಗಳಿಗೆ ನೇರವಾಗಿ ತಲುಪಿಲ್ಲ. ಫಲಾನುಭವಿಗಳಲ್ಲದವರು ಈ ಉಪಕರಣಗಳನ್ನು ಬಳಸುತ್ತಿದ್ದಾರೆ. ಈ ಬಗ್ಗೆ ಕೃಷಿ ಇಲಾಖೆಯವರು ಯಾವ ಕ್ರಮ ಕೈಗೊಂಡಿದ್ದೀರಿ? ಎಂದು ಪ್ರಶ್ನಿಸಿದರು. ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಸಹಮತ ವ್ಯಕ್ತಪಡಿಸಿದರು.

ಜಂಟಿ ಕೃಷಿ ನಿರ್ದೇಶಕರು ಮಾತನಾಡಿ, ಸರ್ಕಾರ ನಿಗಧಿಪಡಿಸಿದ ಕಂಪನಿಯಿಂದ ಪರಿಕರ ನೀಡಲಾಗುತ್ತಿದೆ, ಫಲಾನುಭವಿಗಳು ಉಪಕರಣಗಳನ್ನು ಬಳಸುತ್ತಿರುವ ಬಗ್ಗೆ ಖಾಸಗಿ 3ನೇ ಏಜೆನ್ಸಿಯವರಿಂದ ಪರಿಶೀಲನೆ ನಡೆಸಲಾಗಿದೆ ಎಂದು ತಿಳಿಸಿ ಯಾವುದೇ ಉಪಕರಣ ದುರ್ಬಳಕೆಯಾಗಿಲ್ಲವೆಂದು ಸಭೆಗೆ ಸ್ಪಷ್ಟಪಡಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಒಂದು ವೇಳೆ ದುರ್ಬಳಕೆಯಾಗಿದ್ದಲ್ಲಿ ಅಂತಹವರ ವಿರುದ್ಧ ಕ್ರಮಕೈಗೊಳ್ಳುವಂತೆ ಸೂಚಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕಳೆದ ವರ್ಷ ಬೆಳೆ ವಿಮೆ ಹಣ ರೂ.18.00 ಕೋಟಿ ಬಿಡುಗಡೆಯಾಗಿದೆ. ಇದರಲ್ಲಿ ರೂ.12.00 ಕೋಟಿ ವಿತರಣೆ ಮಾಡಲಾಗಿದೆ. ಈ ವರ್ಷ 21,167 ಮಂದಿ ರೈತರು ರೂ.2.55 ಕೋಟಿ ವಿಮಾ ಕಂತು ಪಾವತಿಸಿದ್ದು, ರೂ.42.93 ಕೋಟಿ ಮೊತ್ತಕ್ಕೆ ವಿಮೆ ಮಾಡಲಾಗಿದೆ, ಬೆಳೆ ನಷ್ಟದ ಬಗ್ಗೆ ಇನ್ನೂ ವರದಿ ನೀಡಲಾಗಿಲ್ಲ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀಮತಿ ಸುಮನಾ ರವರು ಮಾತನಾಡಿ, ಬರದ ಸಂದರ್ಭದಲ್ಲಿ ಪಶುಪಾಲನಾ ಇಲಾಖೆ ಪೂರೈಸಿದ ಮೇವಿನ ಜೋಳದ ಬಿತ್ತನೆ ಬೀಜ ಕಳಪೆ ಗುಣಮಟ್ಟದಿಂದ ಕೂಡಿದೆ. ಮಧುಗಿರಿ ತಾಲ್ಲೂಕು ಕೊಂಡವಾಡಿಯಲ್ಲಿ ನಾವೇ ಈ ಬೀಜ ಬಿತ್ತಿದ್ದು, ಮೇವು ಬಂದಿಲ್ಲ ಶೇ.10ರಷ್ಟು ಪೈರು ಸಹ ಹುಟ್ಟಿಲಿಲ್ಲ, ಈ ಬಗ್ಗೆ ಪರಿಶೀಲಿಸಿ ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಸಭೆಯಲ್ಲಿ ಆಗ್ರಹಿಸಿದರು. ಇದಕ್ಕೆ ಸರ್ವ ಸದಸ್ಯರು ಒಕ್ಕೊರಲಿನಿಂದ ಬೆಂಬಲಿಸಿದರು.

**ಈ ಕುರಿತು ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ತನಿಖೆ ನಡೆಸಿ 15 ದಿನಗಳಲ್ಲಿ ವರದಿ ನೀಡುವಂತೆ ತಿಳಿಸಿ, ತದನಂತರ ಸದರಿ ವರದಿಯನ್ನು ಪರಿಶೀಲಿಸಿ ಅಗತ್ಯವಿದ್ದಲ್ಲಿ ಸದರಿ ಕಂಪನಿಯನ್ನು ಕಪ್ಪುಪಟ್ಟಿಗೆ ಸೇರಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.**

**(ಕ್ರಮ : ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ತುಮಕೂರು)**

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಆನಂದರವಿಯವರು ಮಾತನಾಡಿ, ತೋಟಗಾರಿಕೆ ಇಲಾಖೆಯು ಕಳಪೆ ಗುಣಮಟ್ಟದ ತೆಂಗಿನ ಸಸಿಗಳನ್ನು ವಿತರಣೆ ಮಾಡುತ್ತಿದೆ; ಮಧ್ಯವರ್ತಿಗಳ ಮೂಲಕ ಬಿತ್ತನೆ ತೆಂಗು ಖರೀದಿ ಮಾಡಲಾಗುತ್ತಿದೆ; ಕೆ.ಆರ್.ಪೇಟೆ ಸುತ್ತ-ಮುತ್ತಲಿನಿಂದ ನೀರಾವರಿ ತೆಂಗು ಖರೀದಿಸಿ ಬೀಜ ಮಾಡಲಾಗುತ್ತಿದೆ, ಇದರಿಂದ ಹತ್ತು ವರ್ಷಗಳಾದರೂ ಮರ ಫಲ ಬಿಡುವುದಿಲ್ಲವೆಂದು ಆಪಾದಿಸಿದರು.

ಪ್ರತಿಯಾಗಿ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು ಮಾತನಾಡಿ, ತಿಪಟೂರು ಸೇರಿದಂತೆ ಜಿಲ್ಲೆಯ ಐದು ತಾಲ್ಲೂಕುಗಳಲ್ಲಿ 25,000 ಬಿತ್ತನೆ ತೆಂಗು ಖರೀದಿಸಲಾಗಿದೆ. ಹೊರಗಿನಿಂದ ಖರೀದಿ ಮಾಡುತ್ತಿಲ್ಲ ಎಂದು ಸಭೆಯ ಗಮನಕ್ಕೆ ತಂದರು. ಈ ಸಂಬಂಧ ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಜಿ.ಪಂ.ಸದಸ್ಯರ ಗಮನಕ್ಕೆ ತಂದು 2013ರ ಜನವರಿ 15ರೊಳಗೆ ತೆಂಗಿನ ಸಸಿಗಳನ್ನು ಖರೀದಿಸಲು ಕ್ರಮವಹಿಸುವಂತೆ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರಿಗೆ ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀಮತಿ ಲಲಿತಾ ನಿಂಗಪ್ಪನವರು ಮಾತನಾಡಿ, ಈಗ ಇರುವ ತೆಂಗಿನ ತೋಟ ಮತ್ತು ಮರಗಳನ್ನು ಉಳಿಸಲು ಕ್ರಮವಹಿಸಬೇಕಾಗಿದೆ. ಎಲ್ಲಾ ಕಡೆ ನುಸಿ ರೋಗ ಬರುತ್ತಿದೆ. ರೋಗ ನಾಶಪಡಿಸಲು ಮತ್ತು ಹಳೆಯ ಮರಗಳನ್ನು ಉಳಿಸಿಕೊಳ್ಳಲು ಏನಾದರೂ ವ್ಯವಸ್ಥೆ ಇದೆಯಾ? ಎಂದು ಪ್ರಶ್ನಿಸಿದರು. ಪ್ರತಿಯಾಗಿ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು ಮಾತನಾಡಿ, ಚಿ.ನಾ.ಹಳ್ಳಿ ತಾಲ್ಲೂಕು ವ್ಯಾಪ್ತಿಯಲ್ಲಿ ಪರಾವಲಂಬಿ ಉತ್ಪಾದನೆ ಮಾಡುವ ವ್ಯವಸ್ಥೆ ಇದೆ, ಸಸ್ಯ ಸಂರಕ್ಷಣಾ ಔಷಧಿ ಕೊಟ್ಟು ಯಾವ ರೀತಿ ಸಿಂಪಡಿಸಬೇಕು ಎಂಬ ಬಗ್ಗೆ ರೈತರಿಗೆ ತಿಳಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಯಾವ ಯಾವ ತಾಲ್ಲೂಕಿನಲ್ಲಿ ಯಾವ ಯಾವ ರೈತರ ತೋಟದಲ್ಲಿ ಒಳ್ಳೆಯ ತೆಂಗು ಮರಗಳಿವೆಯೋ ? ಅವುಗಳಿಂದ ಸಸಿಗಳನ್ನು ಬೆಳೆಸಲು ಅನುಮತಿ ನೀಡುವಂತೆ ಕೋರಿ ರೈತರ ಪಟ್ಟಿಯೊಂದಿಗೆ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರಿಗೆ ತಿಳಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಬಗ್ಗೆ ಕೂಲಂಕುಷವಾಗಿ ಪರಿಶೀಲಿಸಿ ಸಂಶೋಧನೆ ಮಾಡಿಸಿ, ಫಲಾನುಭವಿ ರೈತರಿಗೆ ಒಳ್ಳೆಯ ಸಸಿಗಳನ್ನು ವಿತರಿಸಲು ವ್ಯವಸ್ಥೆಗೊಳಿಸುವಂತೆ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ರವರಿಗೆ ತಿಳಿಸಿದರು.

**(ಕ್ರಮ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ತುಮಕೂರು )**

ಮಾನ್ಯ ಜಿ.ಪಂ.ಸದಸ್ಯರಾದ ಡಾ: ರವಿ ಯವರು ಮಾತನಾಡಿ, ಅರಣ್ಯ ಇಲಾಖೆ ಪ್ರತಿ ವರ್ಷ ಹತ್ತಾರು ಸಾವಿರ ಸಸಿಗಳನ್ನು ನೆಟ್ಟಿರುವುದಾಗಿ ಸಭೆಗೆ ಮಾಹಿತಿ ನೀಡುತ್ತಿದ್ದು, ಪ್ರತಿ ವರ್ಷ ಅದೇ ಜಾಗದಲ್ಲಿ ಅದೇ ಸಸಿಗಳನ್ನು ನೆಡುತ್ತಾರೆ, ನೆಟ್ಟ ಸಸಿಗಳಿಗೆ ನೀರು ಹಾಕಿ ಅವುಗಳನ್ನು ಕಾಪಾಡುವುದಿಲ್ಲ, ಇಲಾಖೆಯಲ್ಲಿ ಶೇ.50ರಷ್ಟು ಹಣ ಉಳಿದಿರುತ್ತದೆ ಆರ್ಥಿಕ ವರ್ಷಾಂತ್ಯಕ್ಕೆ ಕೇವಲ ಮೂರು ತಿಂಗಳು ಮಾತ್ರ ಬಾಕಿ ಇದ್ದು, ಹೊಸ ಕ್ರಿಯಾಯೋಜನೆ ಮಾಡಬೇಕಾಗುತ್ತದೆ ಎಂದು ಸಭೆಗೆ ತಿಳಿಸಿದಾಗ, ಅವರ ಮಾತಿಗೆ ಹಲವಾರು ಸದಸ್ಯರುಗಳು ದನಿಗೂಡಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಶಿರಾ ತಾಲ್ಲೂಕಿನ ಕಠಾವೀರನಹಳ್ಳಿ ಅರಣ್ಯ ಪ್ರದೇಶದಲ್ಲಿ ಗಿಡಗಳು ಅಲ್ಲಿಯೇ ಬೇರು ಬಿಟ್ಟಿವೆ, ಅವುಗಳನ್ನು ಕಾಪಾಡುವ ಕಾರ್ಯ ಹಮ್ಮಿಕೊಂಡಿರುವುದಿಲ್ಲ; ಶಾಲಾ ಆವರಣದಲ್ಲಿ ಬೇವು, ನೆಲ್ಲಿ, ಹೊಂಗೆ ಗಿಡಗಳನ್ನು ಬೆಳೆಸುವುದಕ್ಕೆ ಕ್ರಮವಹಿಸಬೇಕು ಎಂದು ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ತ್ರಯಾಂಬಕ ರವರು ಮಾತನಾಡಿ, ಸಸಿಗಳಿಗೆ ಮೊದಲು ರಕ್ಷಣೆ ಕೊಡಬೇಕು; ರಸ್ತೆ ಬದಿಯಲ್ಲಿ ಇರುವಂತಹ ಗಿಡಗಳಿಗೆ ರಕ್ಷಣೆ ಕೊಟ್ಟರೆ ಮಾತ್ರ ಸಫಲವಾಗುತ್ತದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ : ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಮಾಜಿಕ ಅರಣ್ಯ, ತುಮಕೂರು)**

ಮಾನ್ಯ ಜಿ.ಪಂ.ಸದಸ್ಯರುಗಳಾದ ಡಾ: ರವಿ, ಶ್ರೀ ಆನಂದರವಿ, ಶ್ರೀ ಬಡೀರಣ್ಣ, ಶ್ರೀ ಷಡಕ್ಷರಿ, ಶ್ರೀ ಸುಧಾಕರಲಾಲ್, ಶ್ರೀ ತ್ರಯಾಂಬಕ, ಶ್ರೀಮತಿ ಶಾಂತಲಾ ರಾಜಣ್ಣ ಮತ್ತು ಶ್ರೀಮತಿ ಲೋಹಿತಾಬಾಯಿ ಇವರುಗಳು ಮಾತನಾಡಿ, ಪಶು ಸಂಗೋಪನಾ ಇಲಾಖೆಗೆ ಸಂಬಂಧಿಸಿದಂತೆ, ಗ್ರಾಮೀಣ ಪ್ರದೇಶಗಳಲ್ಲಿ ಜಾನುವಾರುಗಳಿಗೆ ಔಷಧಿ ವಿತರಣೆ ಮಾಡುತ್ತಿಲ್ಲ, ಇಲಾಖೆಯಲ್ಲಿ ಯಾವ-ಯಾವ ಔಷಧಿಗಳನ್ನು ಖರೀದಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ; ಯಾವ ಸಂಸ್ಥೆಯವರು ಔಷಧಿ ಸರಬರಾಜು ಮಾಡುತ್ತಿದ್ದಾರೆ ಎಂಬ ಬಗ್ಗೆ ವಿವರವಾದ ಮಾಹಿತಿ ಒದಗಿಸಬೇಕು; ಹಾಗೂ ಒಳ್ಳೆಯ ಗುಣಮಟ್ಟದ ಔಷಧಿಗಳನ್ನೇ ಖರೀದಿಸಬೇಕು, ರೈತರಿಗೆ ಔಷಧಿ ದಾಸ್ತಾನು ಇಲ್ಲ ಎಂಬ ನೆಪ ಮಾಡಿ ರೈತರಿಂದಲೇ ಔಷಧಿ ತರಿಸಲಾಗುತ್ತಿದೆ. ಯಾವ ಆಸ್ಪತ್ರೆಯಲ್ಲಿಯೂ ವೈದ್ಯರು/ಸಿಬ್ಬಂದಿಗಳು ಸಹ ಇರುವುದಿಲ್ಲ, ಯಾವಾಗ ಕೇಳಿದರೂ ಗಣತಿಗೆ ಹೋಗಿರುತ್ತಾರೆಂದು ಹೇಳುತ್ತಾರೆ. ಆಯುಕ್ತರು ಹೇಳಿರುವ ಕಂಪನಿಗಳ ಔಷಧಿಗಳು ಗುಣಮಟ್ಟದಿಂದ ಕೂಡಿರುತ್ತವೆಯೇ? ಆ ದಾಸ್ತಾನು ಜಿಲ್ಲಾ ಪಂಚಾಯತಿಗೆ ತಲುಪುತ್ತಿದೇಯೇ? ಎಂಬುದರ ವಿವರ ನೀಡಲು ತಿಳಿಸಿದರು. ಹಾಗೂ ಕಳೆದ 4 ತಿಂಗಳಿನಿಂದ ದನಗಳಿಗೆ ಸಾಂಕ್ರಮಿಕ ರೋಗ ಬರುತ್ತಿದೆ. ಅದನ್ನು ನಿವಾರಣೆ ಮಾಡಲು ಏನು ಕ್ರಮ ಕೈಗೊಳ್ಳಲಾಗಿದೆ ಎಂದು ಪ್ರಶ್ನಿಸಿದರು? ಚಿ.ನಾ.ಹಳ್ಳಿ ತಾಲ್ಲೂಕಿನಲ್ಲಿ ಅವಶ್ಯವಿರುವ ಔಷಧಿಗಳು ಆಸ್ಪತ್ರೆಯಲ್ಲಿ ದಾಸ್ತಾನು ಇರುವಂತೆ ವ್ಯವಸ್ಥೆ ಮಾಡಬೇಕೆಂದು ಜಿ.ಪಂ. ಮಾನ್ಯ ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀಮತಿ ಮಂಗಳಗೌರಮ್ಮನವರು ಮಾತನಾಡಿ, ಹೊಂಗೆ ಎಣ್ಣೆಗೆ ಬೇಡಿಕೆ ಇದ್ದು ದಾಸ್ತಾನು ಮಾಡಲು ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಡಾ:ರವಿ ಹಾಗೂ ಶ್ರೀಮತಿ ಕಲಾ ರವರು ಮಾತನಾಡಿ, ಔಷಧಿ ಗುಣಮಟ್ಟದ ಬಗ್ಗೆ ಸದರಿ ಔಷಧಿಗಳನ್ನು ಕ್ರಾಸ್ ವೆರಿಫೀಕೇಷನ್ ಮಾಡಿಸಲಾಗಿದೆಯೇ? ಗುಣಮಟ್ಟ ಸರಿಯಿಲ್ಲದ ಬಗ್ಗೆ ಆಯುಕ್ತರ ಗಮನಕ್ಕೆ ತರಲಾಗಿದೆಯೇ? ಎಂದು ಪ್ರಶ್ನಿಸಿದರು. ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ಹೆಚ್ಚಿನ ಔಷಧಿ ಖರೀದಿಸಲು ಹೆಚ್ಚುವರಿ ಅನುದಾನ ಬಿಡುಗಡೆಗೆ ಕೋರಿ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲು ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಪಿ.ಆರ್. ಸುಧಾಕರ್ ಲಾಲ್ ರವರು ಮಾತನಾಡಿ, ತಮ್ಮ ಕ್ಷೇತ್ರ ವ್ಯಾಪ್ತಿಯ ತೋವಿನಕೆರೆ ಗ್ರಾಮದ ಪಶು ಆಸ್ಪತ್ರೆಯಲ್ಲಿ ಔಷಧಿಗಳು ಲಭ್ಯವಿಲ್ಲದೆ ಗೋಶಾಲೆಗೆ ಬಂದಿದ್ದ 3ಜಾನುವಾರುಗಳು ಮೃತಪಟ್ಟಿರುತ್ತವೆ. ಈ ಸಂಬಂಧ ಜಾನುವಾರು ಮಾಲೀಕರುಗಳಿಗೆ ಈವರೆಗೆ ಪರಿಹಾರ ಧನ ನೀಡಿರುವುದಿಲ್ಲ. ಆದುದರಿಂದ ಪರಿಹಾರ ಮಂಜೂರಾತಿಗಾಗಿ ಸರ್ಕಾರಕ್ಕೆ ಈ ಕೂಡಲೇ ಪ್ರಸ್ತಾವನೆ ಸಲ್ಲಿಸಲು ಅಗತ್ಯ ಕ್ರಮವಹಿಸಬೇಕೆಂದು ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ ಇವರಿಗೆ ತಿಳಿಸಿದರು. ಪ್ರತಿಯಾಗಿ ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ ಇವರು ಮಾತನಾಡಿ, ವರ್ಷದ 365ದಿನಗಳೂ ಎಲ್ಲಾ ಪಶು ಆಸ್ಪತ್ರೆಗಳಲ್ಲಿ ಔಷಧಿಗಳು ಲಭ್ಯವಿರುತ್ತದೆ. ಕಾಲಕಾಲಕ್ಕೆ ಜಾನುವಾರುಗಳಿಗೆ ಲಸಿಕೆ

ಹಾಕಲಾಗುತ್ತಿದೆ. ಜಾನುವಾರುಗಳಿಗೆ ಪ್ರತಿ ವರ್ಷದಲ್ಲಿ ಎರಡು ಬಾರಿ ಲಸಿಕೆ ಹಾಕುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಸಿ.ಆರ್. ಉಮೇಶ್ ರವರು ಮಾತನಾಡಿ, ಗೋಶಾಲೆಗಳನ್ನು ಕಂದಾಯ ಇಲಾಖೆಯ ಸಹಭಾಗಿತ್ವದಲ್ಲಿ ಸ್ಥಾಪಿಸಲಾಗಿದ್ದು ಮೇವು ಸರಬರಾಜುದಾರರಿಗೆ ಪಾವತಿಸಬೇಕಾಗಿರುವ ಬಾಕಿ ಹಣದ ಬಗ್ಗೆ ಮಾಹಿತಿ ಒದಗಿಸುವಂತೆ ಕಳೆದ ಸಭೆಯಲ್ಲಿ ಕೇಳಲಾಗಿತ್ತು. ಆದರೆ ಈವರೆಗೆ ಮಾಹಿತಿ ನೀಡಿರುವುದಿಲ್ಲ. ಸದರಿ ವಿಷಯದ ಬಗ್ಗೆ ಚರ್ಚಿಸಲು ಮಾನ್ಯ ಜಿಲ್ಲಾಧಿಕಾರಿಯವರು ಈ ಸಭೆಯಲ್ಲಿ ಉಪಸ್ಥಿತರಿರಬೇಕಿತ್ತು. ಆದರೆ ಅವರು ಕಳೆದ ಸಭೆಗೂ ಹಾಗೂ ಈ ಸಭೆಗೂ ಹಾಜರಾಗಿರುವುದಿಲ್ಲ. ಬೇಸಿಗೆ ಹತ್ತಿರ ಬರುತ್ತಿದ್ದರೂ ಗೋಶಾಲೆಗಳನ್ನು ಪ್ರಾರಂಭಿಸುವ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ಆಕ್ಷೇಪಿಸಿ ಜಾನುವಾರುಗಳ ಗಣತಿಯ ಪ್ರಕಾರ ಮೇವು ಖರೀದಿ/ಸರಬರಾಜಿಗೆ ಯಾವ ರೀತಿ ಕ್ರಮ ವಹಿಸಲಾಗಿದೆ ಎಂಬ ಬಗ್ಗೆ ವಿವರ ನೀಡಬೇಕೆಂದು ಕೋರಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರತಿಕ್ರಿಯಿಸಿ ಜಿಲ್ಲಾಧಿಕಾರಿಯವರು ಗೋಶಾಲೆ ಮೇವಿನ ಬಾಕಿ ನೀಡುವ ಬಗ್ಗೆ ಚರ್ಚಿಸಿದ್ದು 10-15ದಿನದಲ್ಲಿ ಶೀಘ್ರ ಹಣ ಪಾವತಿಗೆ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿರುತ್ತಾರೆ. ಮುಂದುವರೆದು ನಮ್ಮ ಜಿಲ್ಲೆಯಲ್ಲಿ ಸುಮಾರು 25,23,720 ಜಾನುವಾರುಗಳು, ಇದರಲ್ಲಿ 8ಲಕ್ಷ ರಾಸುಗಳು ಇವೆ. ಇದಕ್ಕಾಗಿ ಯೋಜನೆ ಮತ್ತು ಯೋಜನೇತರದಡಿಯಲ್ಲಿ ರೂ.19.40ಕೋಟಿಗಳು ಲಿಂಕ್ ಡಾಕ್ಯೂಮೆಂಟ್ನಲ್ಲಿ ಸೇರಿರುತ್ತದೆ. ಅಂದಾಜು ಕನಿಷ್ಟ ರೂ.54.00ಲಕ್ಷ ಔಷಧಿ ಖರೀದಿಗೆ ಮೀಸಲಿದ್ದು ರೂ.70.80ಲಕ್ಷ ಅಗತ್ಯ ಇದೆ. ಆದರೆ ಸರ್ಕಾರ ಲಿಂಕ್ ಡಾಕ್ಯೂಮೆಂಟ್ ಮಾಡುವ ಸಂದರ್ಭದಲ್ಲಿ ಯಾವ ಯಾವ ಇಲಾಖೆಗೆ ಎಷ್ಟು ಎಷ್ಟು ಹಣ ಕೊಡಬೇಕು ಎಂಬುದರ ಬಗ್ಗೆ ಅಸೆಸ್ ಮಾಡುತ್ತದೆ. ಈ ವರ್ಷ ವಿಶೇಷವಾಗಿ ಜಾನುವಾರುಗಳು ಯಾವುದೇ ರೀತಿಯ ಖಾಯಿಲೆಗಳಿಗೆ ಒಳಗಾಗಬಾರದು ಎಂದು ಇದಕ್ಕಾಗಿ ರೂ.1.00ಕೋಟಿಗಳನ್ನು ಹೆಚ್ಚಿಸಲು ಬೇಡಿಕೆ ಸಲ್ಲಿಸಲಾಗುವುದು. ಔಷಧಿಗಳನ್ನು ರಾಜ್ಯ ಮಟ್ಟದಲ್ಲಿ ಈಗ ಟೆಂಡರ್ ವ್ಯವಸ್ಥೆ ಮಾಡಿ ಔಷಧಿಗಳ ಸರಬರಾಜು ಮಾಡುತ್ತಾರೆ. ಈ ಬಗ್ಗೆ ತಾಂತ್ರಿಕ ಸಮಿತಿ ರಚಿಸಿ ಪರಿಶೀಲಿಸಿದ ನಂತರ ಹಣ ಪಾವತಿ ಮಾಡಲಾಗುವುದು ಎಂದು ತಿಳಿಸಿದರು. ಮುಂದುವರೆದು, ಕಳೆದ ಬೇಸಿಗೆಯಲ್ಲಿ ಗೋಶಾಲೆಯಲ್ಲಿ ಸುಮಾರು 80,000 ರಾಸುಗಳನ್ನು ಸುಧಾರಿಸಲಾಗಿದೆ. ಈ ಸಂಬಂಧ ಮೇವಿನ ಬಾಕಿ ರೂ.2.50ಕೋಟಿ ಬಿಡುಗಡೆಗೆ ಸರ್ಕಾರದ ಅನುಮತಿ ಪಡೆದು ಪಾವತಿಸಲು ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಉಪ ನಿರ್ದೇಶಕರು, ಪಶುಸಂಗೋಪನೆ ಇಲಾಖೆರವರು ಕಳೆದ ಬರದ ಸಂದರ್ಭದಲ್ಲಿ ಜಿಲ್ಲೆಯಲ್ಲಿ 53 ಗೋಶಾಲೆ ತೆರೆಯಲಾಗಿದ್ದು, ಮೇವಿಗಾಗಿ ರೂ.6.55ಕೋಟಿ ಅನುದಾನ ನೀಡಲಾಗಿತ್ತು. ಇದರಲ್ಲಿ ಇನ್ನೂ ರೂ.2.5ಕೋಟಿ ಬಾಕಿ ಬರಬೇಕಾಗಿದೆ. ಮಧುಗಿರಿ ತಾಲ್ಲೂಕಿಗೆ ಮಂಜೂರಾಗಿದ್ದ ರೂ.3.55ಕೋಟಿಯಲ್ಲಿ ಒಂದು ಪೈಸೆಯೂ ಬಂದಿಲ್ಲ. ಆದರೆ ಕೊರಟಗೆರೆಗೆ ಮಂಜೂರಾಗಿದ್ದ ರೂ.2.15ಕೋಟಿ ಸಂಪೂರ್ಣವಾಗಿ ಬಂದಿದೆ. ಉಳಿದ ತಾಲ್ಲೂಕುಗಳಲ್ಲಿ ಭಾಗಶ: ಬಾಕಿ ಇದೆ ಎಂದು ಸಭೆಗೆ ತಿಳಿಸಿದರು.

ಉಪ ನಿರ್ದೇಶಕರು, ಪಶುಸಂಗೋಪನೆ ಇಲಾಖೆರವರು ಮಾನ್ಯ ಸದಸ್ಯರುಗಳ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡದಿರುವುದರಿಂದ ಎಲ್ಲಾ ಜಿ.ಪಂ. ಸದಸ್ಯರು ಅಸಮದಾನ ವ್ಯಕ್ತಪಡಿಸಿದರು. ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಕುರಿ ಮಂಡಳಿಯಿಂದ ಕುರಿಗಳಿಗೆ

ಜಂತುನಾಶಕ ಔಷಧಿ ನೀಡದಿದ್ದರೂ ನೀಡಿದ್ದೇವೆ ಎಂದು ಸುಳ್ಳು ಮಾಹಿತಿ ನೀಡಿದ್ದಾರೆ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಮುಂದುವರೆದು, ಕುರಿ ಅಭಿವೃದ್ಧಿ ಮಂಡಳಿಯಿಂದ ಕುರಿ-ಮೇಕೆಗಳಿಗಾಗಿ ಸರಬರಾಜು ಆಗುತ್ತಿರುವ ಔಷಧಿಗಳ ವಿವರ ಒದಗಿಸಬೇಕು. ಮಧುಗಿರಿ ಉಪವಿಭಾಗದಲ್ಲಿ ಸುಮಾರು 11,000 ಕುರಿ ಸಾಕಾಣಿಕೆದಾರರು ಇದ್ದು, ಯಾವ ಸಂಘಕ್ಕೂ ಕುರಿ ಅಭಿವೃದ್ಧಿ ಮಂಡಳಿಯಿಂದ ನೀಡಿರುವ ಔಷಧಿಗಳನ್ನು ಕೊಟ್ಟಿರುವುದಿಲ್ಲ. ಒಮ್ಮೆ ರೋಗ ಬಂದರೆ 150-200 ಕುರಿಗಳು ಸಾವನ್ನಪ್ಪುತ್ತವೆ. ಎಸ್.ಸಿ.ಪಿ/ಟಿ.ಎಸ್.ಪಿ. ಯೋಜನೆಯಡಿ ಸಹ ಅಂತಹ ಸಂಘಗಳಿಗೆ ಸಹಾಯಧನ ನೀಡುವ ವ್ಯವಸ್ಥೆ ಇದ್ದು, ಇಲಾಖಾ ಅಧಿಕಾರಿಗಳು ಸರ್ಕಾರದ ಸೂಚನೆಯನ್ನು ಪಾಲಿಸುತ್ತಿಲ್ಲವೆಂದು ಸಭೆಗೆ ತಿಳಿಸುತ್ತಾ, ಕಾರ್ಯನಿರತ ಸಂಘಗಳ ವಿವರ ಹಾಗೂ ಯಾವ-ಯಾವ ಸಂಘಗಳಿಗೆ ಸಾಲ ಮಂಜೂರು ಮಾಡಲಾಗಿದೆ ಎಂಬ ಬಗ್ಗೆ ಮಾಹಿತಿ ನೀಡುವಂತೆ ಉಪ ನಿರ್ದೇಶಕರು, ಪಶುಸಂಗೋಪನೆ ಇಲಾಖೆ, ಇವರನ್ನು ಕೋರಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀಮತಿ ಶಾಂತಲಾ ರಾಜಣ್ಣನವರು ಮಾತನಾಡಿ, ಉಪ ನಿರ್ದೇಶಕರು, ಪಶುಸಂಗೋಪನೆ ಇಲಾಖೆ, ಇವರು ಸಭೆಗೆ ಸಮರ್ಪಕ ಉತ್ತರ ನೀಡುತ್ತಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ಈಗ ಪ್ರಾಣಿಗಳಿಗೆ ಕಾಲು ಬಾಯಿ ರೋಗ ಬರುವ ಸಮಯ; ಇದಕ್ಕೆ ಮುಂಜಾಗ್ರತೆಯಾಗಿ ವ್ಯಾಕ್ಸಿನೇಷನ್ ದಾಸ್ತಾನು ನಿರ್ವಹಿಸಿರಬೇಕು; ಕುಣಿಗಲ್ ತಾಲ್ಲೂಕಿನ ಎಲಿಯೂರು ಪಶು ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ಸಾವಿರಾರು ರಾಸುಗಳು ಬರುತ್ತವೆ, ಆದುದರಿಂದ ಸದರಿ ಪಶು ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸಬೇಕು ಹಾಗೂ ಅಲ್ಲಿಗೆ ಒಬ್ಬ ತಜ್ಞ ವೈದ್ಯರನ್ನು ನಿಯೋಜಿಸಬೇಕು ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಉಪ ನಿರ್ದೇಶಕರು, ಪಶುಸಂಗೋಪನೆ ಇಲಾಖೆ ಇವರು ಮಾತನಾಡಿ, ಈ ಕುರಿತು ಕೇಂದ್ರ ಕಛೇರಿಗೆ ಪ್ರಸ್ತಾವನೆ ಸಲ್ಲಿಸುವುದಾಗಿ ಸಭೆಗೆ ಭರವಸೆಯಿತ್ತರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಆನಂದರವಿಯವರು ಮಾತನಾಡಿ, ಗ್ರಾಮೀಣ ಪ್ರದೇಶದಲ್ಲಿ ಜನರು ಜೀವನ ಮಾಡಲು ಮಿಶ್ರತಳಿ ಹಸುಗಳನ್ನು ಸಾಕುತ್ತಿದ್ದಾರೆ. ಈ ಸಂಬಂಧ ಜಾನುವಾರು ಗಣತಿಯಲ್ಲಿ ಮಿಶ್ರತಳಿ ಹಸುಗಳನ್ನು ಪತ್ತೆ ಹಚ್ಚಿದ್ದೀರಾ? ಅವುಗಳಿಗೆ ರೋಗ ಬಂದಾಗ ಔಷಧಿ ಒದಗಿಸಲು ಯಾವ ರೀತಿ ಕ್ರಮ ಕೈಗೊಂಡಿದ್ದೀರಾ? ತಿಂಗಳಲ್ಲಿ 10-15 ಮಿಶ್ರತಳಿ ಹಸುಗಳು ಸಾಯುತ್ತಿದ್ದು, ಅದನ್ನು ತಡೆಗಟ್ಟಲು ಯಾವ ರೀತಿ ಕ್ರಮ ಕೈಗೊಂಡಿದ್ದೀರಾ? ಔಷಧಿಗಳ ದಾಸ್ತಾನು ಮಾಹಿತಿಯನ್ನು ಆಸ್ಪತ್ರೆಗಳ ನಾಮ ಫಲಕದಲ್ಲಿ ಪ್ರಕಟಿಸಲು ಕ್ರಮವಹಿಸಿದ್ದೀರಾ? ಎಂಬ ಬಗ್ಗೆ ಸಮರ್ಪಕ ಮಾಹಿತಿ ನೀಡಬೇಕೆಂದು ಉಪ ನಿರ್ದೇಶಕರು, ಪಶುಸಂಗೋಪನೆ ಇಲಾಖೆ ಇವರನ್ನು ಕೋರಿದರು. ಪ್ರತಿಯಾಗಿ ಉಪ ನಿರ್ದೇಶಕರು, ಪಶುಸಂಗೋಪನೆ ಇಲಾಖೆ ಇವರು ಮಾತನಾಡಿ, ಇದು ಎಲ್ಲಾ ರಾಜ್ಯಗಳಲ್ಲಿ ನಡೆಯುತ್ತಿದ್ದು, ಮಾಹಿತಿ ಲಭ್ಯವಿರುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಟಿ.ಹೆಚ್.ಕೃಷ್ಣಪ್ಪನವರು ಮಾತನಾಡಿ, ಪಶು ಆಸ್ಪತ್ರೆಯಲ್ಲಿ ಕಡ್ಡಾಯವಾಗಿ ಔಷಧಿಗಳ ಮಾಹಿತಿ ಮತ್ತು ವೈದ್ಯರು/ಸಿಬ್ಬಂದಿಗಳು ಹಾಜರಿರುವಂತೆ ಕ್ರಮವಹಿಸಬೇಕೆಂದು ಉಪ ನಿರ್ದೇಶಕರು, ಪಶುಸಂಗೋಪನೆ ಇಲಾಖೆ ಇವರಿಗೆ ತಿಳಿಸಿದರು.

**(ಕ್ರಮ: ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ತುಮಕೂರು )**

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಹೈನುಗಾರಿಕೆ ಬಗ್ಗೆ ಎಲ್ಲರಿಗೂ ಹೆಚ್ಚಿನ ಕಾಳಜಿ ಇದೆ; ಈ ಸಂಬಂಧ ಜಿಲ್ಲಾ ಪಂಚಾಯತ್ ವ್ಯವಸ್ಥೆಯಲ್ಲಿ ಸ್ಥಳೀಯ ಅಭಿವೃದ್ಧಿಗೆ ಕುರಿ-ಟಗರು ಕೊಳ್ಳಲು ಅವಕಾಶವಿದ್ದು, ನಮ್ಮ ತಾಲ್ಲೂಕಿಗೂ ಅವಕಾಶ ಕಲ್ಪಿಸಿದರೆ ಅನುಕೂಲವಾಗುತ್ತದೆ ಎಂದಾಗ ಸಭೆಯ ಮಾನ್ಯ ಅಧ್ಯಕ್ಷರು ಆಗಬಹುದೆಂದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಆಂಜಿನಪ್ಪನವರು ಮಾತನಾಡಿ, ಜಾನುವಾರುಗಳಿಗೆ ಮೇವು ಬೆಳೆಯಲು ನೀರಿನ ಸಮಸ್ಯೆ ಇದೆ, ವಿದ್ಯುತ್ ಸಹ ಇಲ್ಲ, ಆದ್ದರಿಂದ ತೋಟ ಹೊಂದಿರುವ ಎಲ್ಲ ರೈತರಿಗೆ ತಮಿಳುನಾಡಿನ ಮಾದರಿಯಲ್ಲಿ ಸಹಾಯಧನದಡಿ, ಜನರೇಟರ್ ಮತ್ತು ಡೀಸೆಲ್ ವಿತರಿಸಿದರೆ ಒಳ್ಳೆಯದು. ಈ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು. ಬೀಜ ಮತ್ತು ಸ್ಪ್ರಿಂಕ್ಲರ್ ಹಾಗೂ ಹನಿ ನೀರಾವರಿ ಸಹಾಯಧನ ಎಲ್ಲರಿಗೂ ನೀಡಿದರೆ ಒಳ್ಳೆಯದೆಂದರು. ಮುಂದುವರೆದು ಮಾತನಾಡಿ, ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಸುವರ್ಣ ವಸ್ತ್ರ ನೀತಿ ಕಾರ್ಯಕ್ರಮದಡಿ ಪಾವಗಡ ತಾಲ್ಲೂಕಿನ ದೊಮ್ಮತಮರಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ಸೇವಾ ಟ್ರಸ್ಟ್ ಹೆಸರಿಗೆ ಮಂಜೂರಾಗಿದ್ದ ತರಬೇತಿ ಕೇಂದ್ರವನ್ನು ಸ್ಥಳ ಪರಿಶೀಲನೆಯಾದ ಬಳಿಕ ಸದರಿ ತರಬೇತಿ ಕೇಂದ್ರವನ್ನು ಅದೇ ತಾಲ್ಲೂಕಿನ ವೈ.ಎನ್.ಹೊಸಕೋಟೆಯ ಸಿದ್ಧಾಪುರ ಗ್ರಾಮದ ಶ್ರೀ ಆಂಜನೇಯಸ್ವಾಮಿ ಶಿಕ್ಷಣ-ಸಾಂಸ್ಕೃತಿಕ ಸಂಸ್ಥೆಗೆ ಬದಲಾವಣೆ ಮಾಡಿ ಅಧಿಕಾರಿಗಳು ಲೋಪವೆಸಗಿರುತ್ತಾರೆಂದು ಆಕ್ಷೇಪಿಸಿದರು. ಪ್ರತಿಯಾಗಿ ಉಪ ನಿರ್ದೇಶಕರು, ಜವಳಿ ಇಲಾಖೆ, ಇವರು ಮಾತನಾಡಿ, ಹಿಂದಿನ ಸಹಾಯಕ ನಿರ್ದೇಶಕರು ಕಣ್ತಪ್ಪಿನಿಂದ ದೊಮ್ಮತಮರಿ ಗ್ರಾಮದ ಶ್ರೀ ಆಂಜನೇಯಸ್ವಾಮಿ ಸೇವಾ ಟ್ರಸ್ಟ್ ಹೆಸರಿಗೆ ಸದರಿ ತರಬೇತಿ ಕೇಂದ್ರವನ್ನು ಮಂಜೂರು ಮಾಡಿದ್ದು, ನಂತರ ಮೂಲ ದಾಖಲೆಗಳ ಪರಿಶೀಲನೆಯಿಂದ ವೈ.ಎನ್.ಹೊಸಕೋಟೆಯ ಸಿದ್ದಾಪುರ ಗ್ರಾಮದ ಶ್ರೀ ಆಂಜನೇಯಸ್ವಾಮಿ ಶಿಕ್ಷಣ-ಸಾಂಸ್ಕೃತಿಕ ಸಂಸ್ಥೆಗೆ ಮಂಜೂರಾತಿಯಾಗಿರುವುದು ತಿಳಿದು ಬಂದ ಕಾರಣ ಸದರಿ ಬದಲಾವಣೆಯನ್ನು ಮಾಡಲಾಗಿರುತ್ತದೆ ಎಂದು ಸಭೆಗೆ ಸ್ಪಷ್ಟಪಡಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಈ ಕುರಿತು ಮಾನ್ಯ ಸದಸ್ಯರು ಮತ್ತು ಇಲಾಖಾ ಉಪ ನಿರ್ದೇಶಕರು ಸಮಾಲೋಚಿಸಿ ಸಮಸ್ಯೆ ಬಗೆಹರಿಸಿಕೊಳ್ಳಿ, ತಪ್ಪು ಜಿಲ್ಲಾ ಪಂಚಾಯತ್ ನಿಂದಾಗಿದ್ದರೆ ಇಲ್ಲಿಯೇ ಸರಿಪಡಿಸೋಣ ಅಥವಾ ರಾಜ್ಯವಲಯದಲ್ಲಾಗಿದ್ದರೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸೋಣ ಎಂದು ಸಭೆಗೆ ತಿಳಿಸಿದರು.

**ಸುದೀರ್ಘ ಚರ್ಚೆಯ ನಂತರ ದಿನಾಂಕ 27-11-2012ರಂದು ನಡೆದ ಕೃಷಿ ಮತ್ತು ಕೈಗಾರಿಕಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**ಬಿ) ದಿನಾಂಕ 29-11-2012ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು:-**

ಸಾಮಾನ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, ದಿನಾಂಕ 29-11-2012ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಸುಧಾಕರಲಾಲ್ ರವರು ಮಾತನಾಡಿ, ಇತ್ತೀಚೆಗೆ ಕುಣಿಗಲ್ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರ ಮೇಲೆ ನಡೆದ ಹಲ್ಲೆಯ ಸಂಬಂಧ ಜಿಲ್ಲಾ ಪಂಚಾಯತ್ ಮಾನ್ಯ ಅಧ್ಯಕ್ಷರ ವಿರುದ್ಧ ಪೋಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು, ಅಧ್ಯಕ್ಷರ ಕಛೇರಿ ವಾಹನವನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆ; ಈವರೆವಿಗೆ ವಾಹನವನ್ನು ಏಕೆ ಬಿಡಿಸಿಕೊಂಡು ಬಂದಿರುವುದಿಲ್ಲ ಎಂದು ಪ್ರಶ್ನಿಸಿದರು; ಅಲ್ಲದೆ, ಜಿಲ್ಲಾ ಪಂಚಾಯತ್ ಕಾರ್ಯವ್ಯಾಪ್ತಿಯಲ್ಲಿ ಏನಾದರೂ ಸಮಸ್ಯೆ ಉಂಟಾದಲ್ಲಿ ಸಂಬಂದಪಟ್ಟ ಇಲಾಖಾಧಿಕಾರಿಗಳನ್ನು ಕರೆಸಿ ಕೇಳುವ ಅಧಿಕಾರ ಜಿ.ಪಂ.ಅಧ್ಯಕ್ಷರಿಗೆ ಇದೆಯೇ? ಅಥವಾ ಇಲ್ಲವೇ? ಎಂಬುದರ ಬಗ್ಗೆ ವಿವರ ನೀಡಬೇಕು, ಹಾಗೂ ಜಿ.ಪಂ.ಅಧ್ಯಕ್ಷರ ಅಧಿಕಾರ ವ್ಯಾಪ್ತಿಯ ಕುರಿತು ಸಹ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾಹಿತಿ ನೀಡಬೇಕು ಎಂದು ಕೋರಿದರು.

ಮಾನ್ಯ ಜಿ.ಪಂ.ಸದಸ್ಯರಾದ ಡಾ: ರವಿಯವರು ಮಾತನಾಡಿ, ಕುಣಿಗಲ್ ತಾಲ್ಲೂಕು ಹುಲಿಯೂರುದುರ್ಗ ಗ್ರಾಮ ಪಂಚಾಯತ್ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ನಡೆದ ಘಟನೆ ಕುರಿತಂತೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಯವರು ಯಾವ ದೃಷ್ಟಿಯಿಂದ ಮೊಕದ್ದಮೆ ಹೂಡಿದ್ದಾರೆ? ಎಂದು ಪ್ರಶ್ನಿಸಿದಾಗ, ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಆಂಜಿನಪ್ಪನವರು ಮಾತನಾಡಿ, ಇದು ಒಂದು ದುರಂತ ಘಟನೆ, ಸದರಿ ಅಧಿಕಾರಿಯು ಪ್ರಜಾಪ್ರಭುತ್ವ ಪದ್ಧತಿಗೆ ಅವಮಾನ ಮಾಡಿದ್ದಾರೆ, ಇದರಿಂದ ಅವರ ವಿರುದ್ಧ ಯಾವ ರೀತಿ ಶಿಸ್ತು ಕ್ರಮ ಕೈಗೊಳ್ಳಲಾಗಿದೆ? ಎಂಬ ಬಗ್ಗೆ ಸಭೆಗೆ ವಿವರ ನೀಡಬೇಕು ಎಂದು ಒತ್ತಾಯಿಸಿದರು.

ಕುಣಿಗಲ್ ಮಾನ್ಯ ಶಾಸಕರು ಮಾತನಾಡಿ, ವಿಷಯ ನ್ಯಾಯಾಲಯದ ಮೆಟ್ಟಿಲೇರಿದ್ದು, ಈ ಬಗ್ಗೆ ಪ್ರಸ್ತಾಪ ಮಾಡುವ ಅಧಿಕಾರವಿರುವುದಿಲ್ಲ. ಪ್ರಸ್ತುತ ನ್ಯಾಯಾಲಯ ನೀಡಿರುವ ಆದೇಶಗಳನ್ನು ಪರಿಪಾಲಿಸಬೇಕಾಗುತ್ತದೆ; ಹುಲಿಯೂರುದುರ್ಗ ಗ್ರಾಮ ಪಂಚಾಯತ್ ರಸ್ತೆ ಅಗಲೀಕರಣ ಮಾಡುವ ಉದ್ದೇಶ ನಮಗೆ ಇರಲಿಲ್ಲ; ರಸ್ತೆ ಪಕ್ಕ ಫುಟ್ ಪಾತ್ ವ್ಯಾಪಾರಿಗಳ ಹಿತದೃಷ್ಟಿಯಿಂದ ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಗ್ರಾಮದಲ್ಲಿ ಜಮೀನು ಕಳೆದುಕೊಂಡ ಮುಖಂಡರ ಸಭೆ ನಡೆಸಿ, ಸರ್ಕಾರದ ಗಮನಕ್ಕೆ ತಂದು ರಸ್ತೆ ಮಧ್ಯಭಾಗದಿಂದ ಎರಡೂ ಬದಿಗೆ 30 ಅಡಿ ರಸ್ತೆ ಅಗಲೀಕರಣ ಮಾಡುವುದಕ್ಕೆ ಬಹುತೇಕ ಜನ ಸ್ವ-ಇಚ್ಛೆಯಿಂದ ಜಾಗ ಬಿಟ್ಟುಕೊಡುವುದಕ್ಕೆ ಒಪ್ಪಿದ್ದಾರೆ; ಸುಮಾರು 23 ಜನ ಉಚ್ಛ ನ್ಯಾಯಾಲಯಕ್ಕೆ ರಿಟ್ ಹಾಕಿದ್ದಾರೆ; (ಜಿಲ್ಲಾಧಿಕಾರಿ, ತುಮಕೂರು / ಉಪವಿಭಾಗಾಧಿಕಾರಿ,ಕುಣಿಗಲ್ ಉಪವಿಭಾಗ / ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ತುಮಕೂರು / ತಹಶೀಲ್ದಾರ್, ಕುಣಿಗಲ್, / ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಹುಲಿಯೂರುದುರ್ಗ ಗ್ರಾಮ ಪಂಚಾಯತ್, ಕುಣಿಗಲ್ ತಾಲ್ಲೂಕು ಇವರುಗಳನ್ನು ಪಾರ್ಟಿ ಮಾಡಿರುತ್ತಾರೆ. ಕೋರ್ಟ್ ಜೂನ್-2012ರಲ್ಲಿ ರಸ್ತೆ ಅಗಲೀಕರಣಕ್ಕೆ ನೇರವಾಗಿ ಪಿ.ಡಿ.ಓ.ಗೆ ಅಧಿಕಾರ ವಹಿಸಿದೆ. ನಂತರ ಈ ವಿಷಯವಾಗಿ ಕಾರ್ಯನಿರ್ವಾಹಕ ಅಧಿಕಾರಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಉಪ ವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಯವರುಗಳ ಸಮ್ಮುಖದಲ್ಲಿ ಮಾನ್ಯ ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ ಚರ್ಚೆ ನಡೆದು ನಿರ್ಣಯವಾಗಿರುತ್ತದೆ; ದಿನಾಂಕ 09-08-2012ರಂದು ಪಂಚಾಯಿತಿಯಿಂದ ನ್ಯಾಯಬದ್ಧ ನೋಟೀಸ್ ಕೊಡಲಾಗಿದೆ. ಇದಲ್ಲದೆ ಕುಣಿಗಲ್ ನಲ್ಲಿ ಸಭೆ ನಡೆಸಿ ಮುಕ್ತಾಯ ನೋಟೀಸ್ ಕೊಟ್ಟಿದ್ದಾರೆ; ಹುಲಿಯೂರುದುರ್ಗ ರಸ್ತೆ ಅಗಲೀಕರಣಕ್ಕೆ ಪ್ರತಿಯೊಬ್ಬ ನಾಗರೀಕರು (ಐದು ಜನರನ್ನು ಹೊರತುಪಡಿಸಿ) ಸ್ವಯಂ-ಪ್ರೇರಿತರಾಗಿ ಸಹಕರಿಸಿದ್ದಾರೆ; ಒಟ್ಟಾರೆ ಕ್ಷೇತ್ರದ ಅಭಿವೃದ್ಧಿ

ಕೆಲಸವಾಗಬೇಕು, ರಸ್ತೆ ಅಗಲೀಕರಣವಾಗಬೇಕು ಎನ್ನುವ ಉದ್ದೇಶದಿಂದ ಮಾಡಲಾಗಿದೆ; ತುಮಕೂರು, ತಿಪಟೂರುಗಳಲ್ಲಿಯೂ ರಸ್ತೆ ಅಗಲೀಕರಣವಾಗಿರುತ್ತದೆ, ನಾವು ಯಾರೂ ಅಡ್ಡ ಹೋಗಿರಲಿಲ್ಲ; ಬಲವಂತದಿಂದ ಕೆಲಸ ಮಾಡಿಲ್ಲ, ರಸ್ತೆ ಹೊಡೆಯುವ ಸಂದರ್ಭದಲ್ಲಿ ಸಂಜೆ 5.00 ಗಂಟೆಗೆ ತಡೆಯಾಜ್ಞೆ ತಂದಿರುತ್ತಾರೆ, ಆಗ ಅಧಿಕಾರಿಗಳು ವಾಪಸ್ ಬಂದಿರುತ್ತಾರೆ; ರಸ್ತೆ ಅಗಲೀಕರಣದಿಂದ ಸಾರ್ವಜನಿಕರಿಗೆ ಯಾವುದೇ ತೊಂದರೆಯಾಗಿರುವುದಿಲ್ಲ, ಆದ್ದರಿಂದ ಈ ಕುರಿತು ಜಿಲ್ಲಾ ಪಂಚಾಯತ್ ನಲ್ಲಿ ಯಾವುದೇ ನಿರ್ಣಯ ಕೈಗೊಳ್ಳಬಾರದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಕುಣಿಗಲ್ ಕ್ಷೇತ್ರದ ಮಾನ್ಯ ಶಾಸಕರ ಮಾತಿಗೆ ಆಕ್ಷೇಪಿಸುತ್ತಾ, ಸಾರ್ವಜನಿಕರು ದೂರವಾಣಿ ಮೂಲಕ ಅಧ್ಯಕ್ಷರಿಗೆ ಮನವಿ ಮಾಡಿದ್ದಾರೆ; ಪಂಚಾಯತ್ ರಾಜ್ ಕಾಯ್ದೆ 1999ರ ನಿಯಮ 237ರ ಪ್ರಕಾರ ಶಾಂತಿಭಂಗದ ಸಂದರ್ಭದಲ್ಲಿ ರಕ್ಷಣೆಗೆ ಹೋಗಿದ್ದಾರೆ; ಕಾರ್ಯನಿರ್ವಾಹಕ ಅಧಿಕಾರಿ, ತಾ.ಪಂ.ಕುಣಿಗಲ್ ಇವರು ಜಿ.ಪಂ.ಅಧ್ಯಕ್ಷರ ಮೇಲೆ ದೂರು ದಾಖಲಿಸುವುದು ಎಷ್ಟು ಸಮಂಜಸ ಎಂದು ಪ್ರಶ್ನಿಸಿದಾಗ, ಮಾನ್ಯ ಶಾಸಕರು ದೂರಿನ ಪ್ರತಿ ಒದಗಿಸುವಂತೆ ಕೋರಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಕುಣಿಗಲ್ ಮಾನ್ಯ ಶಾಸಕರು ಹುಲಿಯೂರುದುರ್ಗ ರಸ್ತೆ ಅಗಲೀಕರಣದ ಬಗ್ಗೆ 20 ನಿಮಿಷಗಳ ಸುದೀರ್ಘ ಅವಧಿಯಲ್ಲಿ ಅಹವಾಲು ಮಂಡಿಸಿದ್ದಾರೆ; ಆದ್ದರಿಂದ ಚರ್ಚೆ ಮಾಡಲು ಅವರಿಗೂ ಮುಕ್ತ ಅವಕಾಶ ನೀಡಬೇಕು ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಪಿ.ಆರ್. ಸುಧಾಕರ್ ಲಾಲ್ ರವರು ಮಾತನಾಡಿ, ಒಬ್ಬ ಕಾರ್ಯನಿರ್ವಾಹಕ ಅಧಿಕಾರಿ ಜಿ.ಪಂ.ಅಧ್ಯಕ್ಷರ ಮೇಲೆ ಕ್ರಿಮಿನಲ್ ಕೇಸ್ ಬುಕ್ ಮಾಡಿದ್ದರ ಔಚಿತ್ಯವಾದರೂ ಏನು? ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಒಂದು ಜಿಲ್ಲೆಯ ಅಬಿವೃದ್ಧಿ ಕೆಲಸ ಮಾಡುವ ಸಂದರ್ಭದಲ್ಲಿ ಅಧ್ಯಕ್ಷರ ಮೇಲೆ ಕೇಸ್ ಬುಕ್ ಮಾಡಿರುವುದು ಅವರ ಉದ್ಧಟತನ ಹಾಗೂ ಇದರಿಂದ ಜಿಲ್ಲಾ ಪಂಚಾಯತ್ ನ ಸರ್ವಸದಸ್ಯರಿಗೂ ಹಾಗೂ ಜಿಲ್ಲೆಯ ಎಲ್ಲ ಜನತೆಗೂ ಅವಮಾನವಾಗಿದೆ; ಈ ಬಗ್ಗೆ ಕೂಲಂಕುಷವಾಗಿ ಚರ್ಚೆಯಾಗಬೇಕು; ಕೇಸ್ ನಲ್ಲಿ ಯಾವ-ಯಾವ ಸೆಕ್ಷನ್ ಗಳನ್ನು ಹಾಕಿದ್ದಾರೆಂಬ ಬಗ್ಗೆ ಪೂರ್ಣ ವಿಷಯ ನಮಗೂ ಗೊತ್ತಾಗಬೇಕು; ಆದ್ದರಿಂದ ದೂರಿನ ಪ್ರತಿ ತರಿಸಬೇಕು ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಕೋರಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಪಂಚಾಯತ್ ರಾಜ್ ಅಧಿನಿಯಮ 1999ರ ನಿಯಮ 71ಮತ್ತು 72ರಲ್ಲಿ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಕ ಅಧಿಕಾರಿಯವರಿಗೆ ಅಧಿಕಾರ ದತ್ತವಾಗಿದ್ದು, ಡೆಮಾಲಿಷನ್ ಗೆ ತಹಶೀಲ್ದಾರು/ಕಾರ್ಯನಿರ್ವಾಹಕ ಅಧಿಕಾರಿ /ಪಿ.ಡಿ.ಓ. ಗೆ ಅಧಿಕಾರವಿದೆಯೇ? ಎಂದು ಪ್ರಶ್ನಿಸಿದರು; ಮುಂದುವರೆದು, ನಿಯಮ 237(1) ಮತ್ತು (3)ರಡಿ ತಾಲ್ಲೂಕು ಪಂಚಾಯತ್ ಅಧ್ಯಕ್ಷರಿಗೆ ಮತ್ತು 237 ರಡಿ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಅಧಿಕಾರ ನೀಡಿರುವ ಬಗ್ಗೆ ತಿದ್ದುಪಡಿಯಾಗಿರುವ ಆದೇಶವನ್ನು ಈ ಸಭೆಗೆ ಮಂಡಿಸಬಹುದು ಎಂದು ತಿಳಿಸಿ, ಈ ಅಧಿಕಾರ ಚಲಾಯಿಸಿದವರ ಮೇಲೆ ಪ್ರಕರಣ ದಾಖಲಿಸಿರುವುದು ಎಷ್ಟು ಸಮಂಜಸವೆಂದು ಪ್ರಶ್ನಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಶಿಕ್ಷೆ ಯಾರಿಗಾದರೂ ಆಗಲೀ ಮಾನ್ಯ ಶಾಸಕರು ಮಾತ್ರ ಚುನಾಯಿತ ಪ್ರತಿನಿಧಿಗಳ ಪರವಾಗಿ ನಿಲ್ಲಬೇಕು ಎಂದು ಹೇಳಿದರು.

ಮಾನ್ಯ ಜಿ.ಪಂ. ಸದಸ್ಯರಾದ ಡಾ:ರವಿ ರವರು ಮಾತನಾಡಿ, ಜಿ.ಪಂ. ಅಧ್ಯಕ್ಷರಿಗೆ ಇಲಾಖಾಧಿಕಾರಿಗಳನ್ನು ಕರೆಸಿ ಚರ್ಚಿಸಲು ಅವಕಾಶವಿದೆಯೇ? ಕಾನೂನು ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣಕರಣದ ಅಧಿಕಾರ ತಹಶೀಲ್ದಾರ್ ಗೆ ಇದೆಯೋ? ಅಥವ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಇದೆಯೋ? ಅಥವ ಪಿ.ಡಿ.ಓ.ಗೆ ಇದೆಯೋ? ಎಂದು ಪ್ರಶ್ನಿಸಿ, ಇಲ್ಲಿ ಯಾರದೇ ವೈಯಕ್ತಿಕ ಅಧಿಕಾರ ಇಲ್ಲ. ಯಾವ ನಿಯಮದ ಅಡಿ ಪಿ.ಡಿ.ಓ.ಗೆ ಅಧಿಕಾರ ನೀಡಿದ್ದಾರೆ? ಪಂಚಾಯತ್ ರಾಜ್ ಅಧಿನಿಯಮ 1999ರ ನಿಯಮ 237(1) ಮತ್ತು (3) ರನ್ವಯ ಅಧಿಕಾರಿಗಳನ್ನು ಐ.ಬಿ.ಗೆ ಕರೆಸಿರುತ್ತಾರೆ, ಹುಲಿಯೂರು ಗ್ರಾಮ ಪಂಚಾಯತಿ ಪಿ.ಡಿ.ಓ.ರವರು ಮನವಿ ನೀಡಿರುತ್ತಾರೆ; ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ಇವರು ಮಾಹಿತಿ ಹಕ್ಕು ಅಧಿನಿಯಮದ ಅಡಿ ರಾಜ್ಯ ಹೆದ್ದಾರಿ 33ರ ಅಗಲೀಕರಣಕ್ಕೆ ಆದೇಶ ಬಂದಿಲ್ಲ. ಕಟ್ಟಡ ತೆರವುಗೊಳಿಸಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲವೆಂದು ತಿಳಿಸಿರುತ್ತಾರೆ; ಆದರೆ, ಉಪವಿಭಾಗಾಧಿಕಾರಿ, ತುಮಕೂರು ಮತ್ತು ಮಾನ್ಯ ಶಾಸಕರು, ಕುಣಿಗಲ್ ಇವರ ಸೂಚನೆಯಂತೆ ರಸ್ತೆಯ ಮಧ್ಯ ಭಾಗದಿಂದ ಎರಡು ಬದಿಗೆ 30ಅಡಿ ರಸ್ತೆ ಅಗಲೀಕರಣಕ್ಕೆ ಆದೇಶ ನೀಡಿರುತ್ತಾರೆ; ಇದರಿಂದ ಬುದ್ದಿವಂತರು ನ್ಯಾಯಾಲಯದ ಮೊರೆ ಹೋಗಿರುತ್ತಾರೆ. ಅವರುಗಳನ್ನು ಬಿಟ್ಟು ಕ್ರಮವಹಿಸುವಂತೆ ಕೋರ್ಟ್ ಆದೇಶದಲ್ಲಿ ತಿಳಿಸಲಾಗಿದ್ದು ಅದರಲ್ಲಿ ಜಿಲ್ಲಾಧಿಕಾರಿ, ತುಮಕೂರು /ಉಪವಿಭಾಗಾಧಿಕಾರಿ, ಕುಣಿಗಲ್/ ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ, ತುಮಕೂರು/ಪಿ.ಡಿ.ಓ.ಹುಲಿಯೂರುದುರ್ಗ ಇವರುಗಳನ್ನು ಪಾರ್ಟಿ ಮಾಡಿರುತ್ತಾರೆ. ಈ ಪೈಕಿ ಪಿ.ಡಿ.ಓ. ಕಟ್ಟುಕಡೆಯವರಾಗಿರುತ್ತಾರೆ.; ತಿಪಟೂರು ಮತ್ತು ತುಮಕೂರಿನ ಎಲ್ಲಡೆ ಜಿ.ಪಂ.ನಿಂದಲೇ ರಸ್ತೆ ಅಗಲೀಕರಣ ಮಾಡಲಾಗಿದೆಯೇ? ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ದೂರವಾಣಿ ಮೂಲಕ ಕರೆ ಮಾಡಿದರೆ ಅವರು ಫೋನ್ ಎತ್ತಿರುವುದಿಲ್ಲ. ಉಪ ಕಾರ್ಯದರ್ಶಿ (ಅಭಿವೃದ್ಧಿ)ರವರಿಗೆ ಕರೆ ಮಾಡಿದರೆ ಅವರ ಫೋನ್ ದುರಸ್ತಿಯಲ್ಲಿರುತ್ತದೆ; ಜೂನ್ 20ರಂದು ನೋಟೀಸ್ ನೀಡಿದ್ದು, 26ರಂದು ಕಟ್ಟಡ ತೆರವುಗೊಳಿಸಿರುತ್ತಾರೆ. ತಾಲ್ಲೂಕು ಪಂಚಾಯತಿ ಅಧ್ಯಕ್ಷರಿಗೆ ಅರ್ಜಿ ನೀಡಿ ಪಂ.ರಾ.ಅಧಿನಿಯಮ 1999ರ ನಿಯಮ 237ರಡಿ ದತ್ತವಾದ ಅಧಿಕಾರ ಚಲಾಯಿಸಿ ತಡೆಯಾಜ್ಞೆ ತಂದಿರುತ್ತಾರೆ; ಪಿ.ಡಿ.ಓ.ರವರು ಕಾಮಗಾರಿ ಅನುಷ್ಠಾನಕ್ಕೆ ಮಾತ್ರ ಅಧಿಕಾರ ಹೊಂದಿರುತ್ತಾರೆ; ನಿಯಮ 73ರಡಿ ಪ್ರಶ್ನೆ ಮಾಡಲು ತಾಲ್ಲೂಕು ಪಂಚಾಯತಿರವರ ಕೋರ್ಟಿಗೆ ಅಧಿಕಾರ ಇರುತ್ತದೆ, ಇದನ್ನು ಪರಿಶೀಲಿಸಿದ್ದೀರಾ? ನಂತರ ಮುಖ್ಯ ಕಾರ್ಯನಿರ್ವಾಹಕ ಅಧಿಕಾರವಿರುತ್ತದೆ, ಇದನ್ನು ಪರಿಶೀಲಿಸಿದ್ದೀರಾ? ಇದಕ್ಕೆ ಯಾರು ಹೊಣೆಗಾರರು? ಕಾನೂನು ಸಂರಕ್ಷಣೆ ಕೇಳಿರುವುದನ್ನು ಬಿಟ್ಟರೆ ಇದರಲ್ಲಿ Wrongful consignment ಎಲ್ಲಿ ಬಂತು? ಜಿ.ಪಂ. ಅಧ್ಯಕ್ಷರು ತುಮಕೂರು ಬಿಡುವಾಗ ಕೂಡ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಜೊತೆ ದೂರವಾಣಿಯಲ್ಲಿ ಮಾತನಾಡಿದ್ದಾರೆ; ಇದರಲ್ಲಿ ಯಾರದೆ ವೈಯಕ್ತಿಕ ವಿಚಾರವಿಲ್ಲ. ಯಾರ ಸ್ವತ್ತೂ ಇಲ್ಲ. ಈ ವಿಷಯದ ಕುರಿತು 32 ದಿನಗಳಿಂದ ಏನು ಕ್ರಮವಹಿಸಿದ್ದೀರಿ? ಎಂದು ಪ್ರಶ್ನಿಸಿದರು. ಹಾಗೂ ಅಧಿಕಾರಿಗಳು ತಮ್ಮ ಜವಾಬ್ದಾರಿಯನ್ನು ಸರಿಯಾದ ರೀತಿಯಲ್ಲಿ ಪರಿಪಾಲಿಸುತ್ತಿಲ್ಲ, ನಿಯಮ 237ನ್ನು ಏಕೆ

ಸರಿಯಾಗಿ ಪರಿಪಾಲನೆ ಮಾಡಿಲ್ಲವೆಂದು ಆಕ್ಷೇಪಿಸಿ ಇದಕ್ಕೆ ಮಾನ್ಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರೇ ಉತ್ತರಿಸಬೇಕೆಂದು ಒತ್ತಾಯಿಸಿದರು.

ಕುಣಿಗಲ್ ಮಾನ್ಯ ಶಾಸಕರು ಮಾತನಾಡಿ, ರಸ್ತೆ ಅಗಲೀಕರಣಕ್ಕೆ ಕಾನೂನು ಪ್ರಕಾರವೇ ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಡಾ:ರವಿರವರು ಮಾತನಾಡಿ, ಕಾನೂನು ಪ್ರಕಾರ ಉಪವಿಭಾಗಾಧಿಕಾರಿ/ಜಿಲ್ಲಾಧಿಕಾರಿಯವರು ಕಟ್ಟಡ ತೆರವುಗೊಳಿಸಬೇಕು. ಆದರೆ ಕಾರ್ಯನಿರ್ವಾಹಕ ಅಧಿಕಾರಿ/ಪಿ.ಡಿ.ಓ. ಏಕೆ ಕಟ್ಟಡ ತೆರವುಗೊಳಿಸಬೇಕು? ಇದಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಉತ್ತರ ಕೊಡಲೇ ಬೇಕು ಎಂದು ಒತ್ತಾಯಿಸಿದರು.

ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ಆಡಳಿತದಲ್ಲಿ ಇಂತಹ ತೊಂದರೆಗಳು ಸಾಮಾನ್ಯವಾಗಿರುತ್ತವೆ. ಆದರೆ ಸೌಮ್ಯಸ್ವಭಾವದ ಅಧ್ಯಕ್ಷರ ಮೇಲೆ ಪ್ರಕರಣ ದಾಖಲಾಗಿರುವುದು ಪ್ರಜಾಪ್ರಭುತ್ವದ ದುರಾದೃಷ್ಟ. ಸಿ.ಆರ್.ನಂ.247 1,2 ಕಲಂ 143, 342, 352, 353, 357, 358, 365, 367, 504,506 read with 149 IPC ಅಡಿಯಲ್ಲಿ ಕೇಸ್ ದಾಖಲಾಗಿದೆ. ಈ ಕುರಿತು ತಮ್ಮ ಅಭಿಪ್ರಾಯ ಏನಾದರೂ ಇದ್ದರೆ ದಯವಿಟ್ಟು ಸಭೆಗೆ ತಿಳಿಸಿ ಎಂದು ಮಾನ್ಯ ಅಧ್ಯಕ್ಷರಲ್ಲಿ ಕೋರಿದರು. ಮುಂದುವರೆದು, ರಸ್ತೆ ಅಗಲೀಕರಣ ವಿಷಯದಲ್ಲಿ ಪಂಚಾಯತಿ ಅಭಿವೃದ್ಧಿಯ ಪಾತ್ರ ಏನು ಎಂಬುದರ ಬಗ್ಗೆ ಸಭೆಯಲ್ಲಿ ಚರ್ಚಿಸಬೇಕು; ತಾಲ್ಲೂಕು ಪಂಚಾಯತಿ ಅಧಿಕಾರಿಯನ್ನು ಕರೆದು ಕೇಳಿದಾಗ ಅವರು ನಿಮ್ಮ ಮೇಲೆ ಪ್ರಕರಣ ದಾಖಲಿಸುವುದಕ್ಕೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅನುಮತಿ ಪಡೆದಿದದ್ದಾರೆಯೇ? ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಈ ಬಗ್ಗೆ ಕಾರ್ಯನಿರ್ವಾಹಕ ಅಧಿಕಾರಿಯವರಿಂದ ವಿವರಣೆ ಪಡೆದಿದ್ದಾರೆಯೇ? ಎಂಬ ಬಗ್ಗೆ ಸಭೆಗೆ ಮಾಹಿತಿ ನೀಡಬೇಕೆಂದು ತಿಳಿಸಿ, ಈ ಹಿನ್ನಲೆಯಲ್ಲಿ ಮಾನ್ಯ ಅಧ್ಯಕ್ಷರು ಮಾನಸಿಕ ಆಘಾತಕ್ಕೆ ಒಳಗಾಗಿದ್ದು 15 ದಿವಸ ಕಛೇರಿಗೆ ಬರಲಿಲ್ಲವೆಂದು ತಿಳಿಸಿ, ಈ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಉತ್ತರ ನೀಡಬೇಕು ಎಂದರು.

ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ಉಮೇಶ್ ರವರು ಮಾತನಾಡಿ, ಅಧ್ಯಕ್ಷರು ಉಪಯೋಗಿಸುತ್ತಿದ್ದ ಕಛೇರಿ ಕಾರನ್ನು ಪೋಲೀಸರು ಸೀಸ್ ಮಾಡಿದ್ದು ಸದರಿ ವಾಹನವನ್ನು ಈವರೆಗೆ ಏಕೆ ಬಿಡಿಸಿಕೊಂಡು ಬಂದಿರುವುದಿಲ್ಲ ಎಂಬುದರ ಬಗ್ಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಉತ್ತರ ನೀಡಬೇಕು ಎಂದರು.

ಮಾನ್ಯ ಜಲ್ಲಾ ಪಂಚಾಯತ್ ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಐ.ಪಿ.ಸಿ. ಸೆಕ್ಷನ್ 353, 367 ಮತ್ತು 506ರ ಬಗ್ಗೆ ವಿಶ್ಲೇಷಿಸಿದರು.

ಉಪ ಕಾರ್ಯದರ್ಶಿ (ಅಭಿವೃದ್ಧಿ) ರವರು ಮಾತನಾಡಿ, ಸದರಿ ಪ್ರಕರಣದಲ್ಲಿ ಜಿಲ್ಲಾ ಪಂಚಾಯತ್ ಮಾನ್ಯ ಅಧ್ಯಕ್ಷರ ಮೇಲೆ ಪ್ರಕರಣ ದಾಖಲು ಮಾಡಿರುವುದು ನಮ್ಮ ಗಮನಕ್ಕೆ ಬಂದಿರಲಿಲ್ಲ, ಅದಕ್ಕೆ ಸಂಬಂಧಪಟ್ಟ ಕಡತಗಳನ್ನು ತಾಲ್ಲೂಕು ಪಂಚಾಯತ್ ಕುಣಿಗಲ್ ಕಛೇರಿಯಿಂದ ತರಿಸಿಕೊಂಡು ಕಡತ ಪರಿಶೀಲನೆ ಮಾಡಲಾಗಿದೆ ಎಂದು ತಿಳಿಸಿ ದೂರಿನಲ್ಲಿ ನಮೂದಿಸಿರುವ ಅಂಶಗಳನ್ನು ಸಭೆಯಲ್ಲಿ ಓದಿದರು; ಹಾಗೂ ಈ ಪತ್ರದಲ್ಲಿನ ಸಾರಾಂಶದಂತೆ ಅನ್ವಯವಾಗುವ ಐ.ಪಿ.ಸಿ ಕೋಡ್ ಗಳ ಆಧಾರದಲ್ಲಿ ಎಫ್.ಐ.ಆರ್. ಹಾಕಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿಲ್ಲಾ ಪಂಚಾಯತ್ ಸದಸ್ಯರಾದ ಡಾ:ರವಿ ರವರು ಮಾತನಾಡಿ, ಯಾವುದೇ ಒಬ್ಬ ಅಧಿಕಾರಿ ಜಿಲ್ಲಾಧಿಕಾರಿಯವರ ಜೊತೆಯಲ್ಲಿ ಇರುವಾಗ ಬೇರೆಯವರ ಜೊತೆ ಮಾತನಾಡಬಾರದೆಂಬ ನಿಯಮ ಇದೆಯಾ? ಎಂದು ಪ್ರಶ್ನಿಸಿದರು. ಮುಂದುವರೆದು ರಸ್ತೆ ಅಗಲೀಕರಣದ ಕುರಿತು ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಅಧಿಕಾರವಿಲ್ಲದೆ ಇರುವುದರಿಂದ ಸೆಕ್ಷನ್ 73ರನ್ನು ಪರಿಪಾಲಿಸಿ ಕಾಲಾವಕಾಶ ನೀಡುವಂತೆ ಐ.ಬಿ.ಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿರುವುದು ಸತ್ಯ ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸದರಿ ಪ್ರಕರಣದ ಬಗ್ಗೆ ಸಭೆಯಲ್ಲಿ ಕುಣಿಗಲ್ ಮಾನ್ಯ ಶಾಸಕರು ಮತ್ತು ಉಪಕಾರ್ಯದರ್ಶಿ (ಅಭಿವೃದ್ಧಿ) ಇವರುಗಳು ಬೆಳಕು ಚೆಲ್ಲಿರುತ್ತಾರೆ. ಕಾರ್ಯನಿರ್ವಾಹಕ ಅಧಿಕಾರಿಯವರ ಸಮಸ್ಯೆ ಏನು ಎಂಬುದು ಗೊತ್ತಾಗಿದೆ, ಅದರಂತೆ ಮಾನ್ಯ ಅಧ್ಯಕ್ಷರು ತಮ್ಮ ಅನುಭವ ಹೇಳಿದರೆ ಅದೂ ಕೂಡ ನಡವಳಿಯಲ್ಲಿ ದಾಖಲಾಗುತ್ತದೆ, ಆನಂತರ ನನ್ನ ಅಭಿಪ್ರಾಯವನ್ನು ತಿಳಿಸುವುದು ಸೂಕ್ತವಾಗಿದೆ ಎಂದು ಸಭೆಗೆ ತಿಳಿಸಿದಾಗ ಮಾನ್ಯ ಗುಬ್ಬಿ ಶಾಸಕರು ಮಾತನಾಡಿ, ಪ್ರಸ್ತುತ ನೀವು ಕ್ರಮವಹಿಸಿರುವ ಬಗ್ಗೆ ಮಾತ್ರ ಪ್ರಸ್ತಾಪ ಮಾಡಿ; ಅಧ್ಯಕ್ಷರು ಅವರ ಅನುಭವವನ್ನು ನ್ಯಾಯಾಲಯದಲ್ಲಿ ಹೇಳುತ್ತಾರೆ. ನೀವು ನಿಮ್ಮ ಕ್ರಮದ ಬಗ್ಗೆ ತಿಳಿಸಿ, ವಿಷಯವನ್ನು ಮುಕ್ತಾಯಗೊಳಿಸಿ ಎಂದು ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಉಗ್ರಯ್ಯನವರು ಮಾತನಾಡಿ, ಸದರಿ ದೂರಿನಲ್ಲಿ 2 ವಾಹನಗಳಲ್ಲಿ 25ಜನ ಬಂದಿರುತ್ತಾರೆಂದು ಹೇಳಲಾಗಿದೆ; ಅಧ್ಯಕ್ಷರ ಕಾರಿನಲ್ಲಿ 25ಜನ ಹೇಗೆ ಬರುತ್ತಾರೆ? ಸುಳ್ಳು ಕೇಸ್ ಏಕೆ ಬುಕ್ ಮಾಡಿದ್ದಾರೆ? ಈ ಬಗ್ಗೆ ತಾವು ಏನು ಕ್ರಮ ಕೈಗೊಂಡಿದ್ದೀರಿ ಎಂದು ಸಭೆಗೆ ತಿಳಿಸಬೇಕೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಸಭೆಯಲ್ಲಿ ಒತ್ತಾಯಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಹುಲಿಯೂರುದುರ್ಗ ರಸ್ತೆ ಒತ್ತುವರಿ ಬಗ್ಗೆ ನನಗೆ ಮಾಹಿತಿ ಇತ್ತು; ಮಾನ್ಯ ಅಧ್ಯಕ್ಷರು ದೂರವಾಣಿ ಕರೆ ಮಾಡಿದ್ದರು; ಆ ಸಂದರ್ಭದಲ್ಲಿ (ಭಾನುವಾರ) ನಮ್ಮ ಹತ್ತಿರದ ಸಂಬಂಧಿಯೊಬ್ಬರ ಸಾವಿನಿಂದ ಮನೆಯಲ್ಲಿ ದು:ಖದ ಪರಿಸ್ಥಿತಿಯಲ್ಲಿದ್ದೆವು; ಹೀಗಾಗಿ, ಮಾನ್ಯ ಅಧ್ಯಕ್ಷರು ಹುಲಿಯೂರುದುರ್ಗಕ್ಕೆ ಹೋಗಿರುವ ಬಗ್ಗೆ ಮಾಹಿತಿ ಇರಲಿಲ್ಲ; ಅದಕ್ಕೆ ಮುನ್ನ ಶುಕ್ರವಾರದಂದು ಹಿರಿಯರೊಬ್ಬರು ಬಂದು ಈ ವಿಷಯದಲ್ಲಿ ಮಧ್ಯಸ್ಥಿಕೆ ವಹಿಸುವಂತೆ ನನ್ನನ್ನು ಕೋರಿದರು; ನಾನು ಈಗ ಊರಿಗೆ ಹೋಗುತ್ತಿದ್ದೇನೆ, ಅಗತ್ಯ ದಾಖಲೆಗಳನ್ನು ತನ್ನಿ, ನಾಳೆ ಬಂದು ನೋಡುತ್ತೇನೆ ಎಂದು ಹೇಳಿದ್ದೆನು; ಅದರಂತೆ ಅವರು ದಾಖಲೆಗಳನ್ನು ಒದಗಿಸಿದರು ಹಾಗೂ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಲು ಕೋರಿ ಅರ್ಜಿ ನೀಡಿದರು; ಸಂಬಂಧಪಟ್ಟ ಹಕ್ಕು ದಾಖಲೆ ಇರಲಿಲ್ಲವಾದ್ದರಿಂದ ಕಾಳಜಿವಹಿಸಲಿಲ್ಲ, ಒತ್ತುವರಿ ಕಾರ್ಯ ಆರಂಭವಾಯಿತು; ಈ ಬಗ್ಗೆ ಮಾನ್ಯ ಅಧ್ಯಕ್ಷರು/ ಕಾರ್ಯನಿರ್ವಾಹಕ ಇಂಜಿನಿಯರ್ ಏನೂ ತಿಳಿಸಲಿಲ್ಲ; ಕಾರ್ಯಾಚರಣೆ ಪ್ರಾರಂಭವಾಗಿ ಪ್ರಕರಣ ದಾಖಲಾಗಿರುವುದು ಸಹ ಗೊತ್ತಿರುವುದಿಲ್ಲ, ಅಂದಮೇಲೆ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯವರು ಅನುಮತಿ ನೀಡುವ ಪ್ರಮೇಯ ಬರುವುದಿಲ್ಲ, ಸೋಮವಾರ ಮಧ್ಯಾಹ್ನ ಕಾರ್ಯನಿರ್ವಾಹಕ ಅಧಿಕಾರಿ, ಕುಣಿಗಲ್ ರವರು ನಡುಕದ ಧ್ವನಿಯಲ್ಲಿ ಗಾಬರಿಯಿಂದ ದೂರವಾಣಿ ಕರೆ ಮಾಡಿ, ಇದೇ ವಿಷಯ ತಿಳಿಸಿದರು ಹಾಗೂ ತನ್ನಿಂದ ಕೆಲಸ ಮಾಡಲಾಗುವುದಿಲ್ಲ, ನನಗೆ ಜೀವಭಯವಿದೆ, ಇಲ್ಲಿಂದ ಬಿಡಿಸಿ ಎಂದರು; ಅವರ ಮನೆಯವರೂ ಸಹ ಗಾಬರಿಯಲ್ಲಿದ್ದರು-

ನನ್ನೊಡನೆ ಚರ್ಚಿಸಿದ್ದರು; ಇದರಿಂದಾಗಿ ಅವರಿಗೆ ರಜೆ ಮಂಜೂರು ಮಾಡಿದ್ದೇನೆ, ಈಗ ಅವರು ರಜೆಯಲ್ಲಿರುತ್ತಾರೆ; ನಾನು ಹುಲಿಯೂರುದುರ್ಗಕ್ಕೆ ಹೋಗಿ ಪರಿಶೀಲಿಸಿರುತ್ತೇನೆ; ಕಡತದ ಪ್ರಕಾರ ತಾಲ್ಲೂಕು ಪಂಚಾಯತ್ ಸಭೆಯಲ್ಲಿ ನಿರ್ಣಯವಾಗಿದೆ, ಸಭೆಯಲ್ಲಿ ಉಪವಿಭಾಗಾಧಿಕಾರಿ/ಜಿಲ್ಲಾಧಿಕಾರಿ/ಶಾಸಕರು/ಕಾರ್ಯಪಾಲಕಇಂಜಿನಿಯರ್, ಲೋಕೋಪಯೋಗಿ ಇಲಾಖೆ ಎಲ್ಲರೂ ಸೇರಿ ನಿರ್ಣಯ ಮಾಡಿ ಒತ್ತುವರಿಗೆ ಮಾರ್ಕ್ ಮಾಡಿರುತ್ತಾರೆ, ಎಲ್ಲವೂ ಬರವಣಿಗೆಯಲ್ಲಿದೆ; ಕಡತವನ್ನು ಪರಿಶೀಲಿಸಲಾಗಿ, ಕೋರ್ಟ್ ಆದೇಶ 4ರಲ್ಲಿ ಕೋರ್ಟ್ ಇಂಟರ್ಫಿಯರ್ ಆಗುವುದಿಲ್ಲ, ಕ್ರಮ ಕೈಗೊಳ್ಳಿ ಎಂದು ಸ್ಪಷ್ಟಪಡಿಸಿದ್ದಾರೆ, 23ಮಂದಿ ತಡೆಯಾಜ್ಞೆ ತಂದಿದ್ದಾರೆ, ಕಾರ್ಯಾಚರಣೆ ಸ್ಥಗಿತಗೊಂಡಿದೆ; ಈಗ ಹುಲಿಯೂರುದುರ್ಗ ರಸ್ತೆ ಒತ್ತುವರಿ ಪ್ರಕರಣ ಉಚ್ಛ ನ್ಯಾಯಾಲಯದಲ್ಲಿರುವುದರಿಂದ ಇಲ್ಲಿ ಚರ್ಚೆ ಅಪ್ರಸ್ತುತ; ಕಾರ್ಯನಿರ್ವಾಹಕ ಅಧಿಕಾರಿಯವರು ದೂರು ನೀಡಿರುವುದರಿಂದ ಮಾನ್ಯ ಅಧ್ಯಕ್ಷರಿಗೆ ಆಘಾತವಾಗಿರುವುದು ಎಲ್ಲರಿಗೂ ನೋವಾಗಿದೆ; ಆದರೆ ಕಾರ್ಯನಿರ್ವಾಹಕ ಅಧಿಕಾರಿಯವರು ಎಲ್ಲರೊಡನೆ ಸಹಕಾರದಿಂದ ಹೊಂದಿಕೊಂಡು ಕೆಲಸ ಮಾಡುತ್ತಾರೆ; ಪಂಚಾಯತ್ ರಾಜ್ ಅಧಿನಿಯಮ 1999ರ ನಿಯಮ 145, 158 ಹಾಗೂ 184ರಡಿ ಕ್ರಮವಾಗಿ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್, ಮತ್ತು ಜಿಲ್ಲಾ ಪಂಚಾಯತ್ ಗಳು ಏನೇನು ಮಾಡಬೇಕೆಂಬುದನ್ನು ತಿಳಿಸಲಾಗಿದೆ; ಪೋಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ, ಆದ್ದರಿಂದ ಮಾನ್ಯ ಅಧ್ಯಕ್ಷರು ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಎತ್ತಾಕ್ಕೊಂಡ್ಹೋಗೋದು ಸೂಕ್ತವೋ ಅಲ್ಲವೋ ಅಪ್ರಸ್ತುತ; ಕಾರ್ಯನಿರ್ವಾಹಕ ಅಧಿಕಾರಿಯವರು ದೂರು ಕೊಡಬೇಕಾ? ಬೇಡವಾ? ಸೆಕ್ಷನ್ ಉಲ್ಲಂಘನೆಯಾಗಿದೆಯಾ? ಸರ್ಕಾರದ ಪರವಾಗಿ ಪಿ.ಡಿ.ಓ.ರವರೇ ಕೆಲಸ ಮಾಡಿದ್ದಾರಾ?, ಈ ಎಲ್ಲದರ ಬಗ್ಗೆ ನ್ಯಾಯಾಲಯ ತೀರ್ಮಾನ ಮಾಡುತ್ತದೆ; ಜಿಲ್ಲಾ ಪಂಚಾಯತ್ ನಿಂದ ಇಂಟರ್ವೀನಿಂಗ್ ಅಪ್ಲಿಕೇಷನ್ ಹಾಕಬಹುದೇ? ಎಂಬ ಬಗ್ಗೆ ನ್ಯಾಯವಾದಿಗಳೊಡನೆ ಚರ್ಚಿಸಿ ಕ್ರಮವಹಿಸುತ್ತೇನೆ; ಮಾನ್ಯ ಅಧ್ಯಕ್ಷರು ದೂರವಾಣಿ ಕರೆ ಮಾಡಿ ಪೋಲೀಸರು ವಾಹನ ಕೇಳುತ್ತಿದ್ದಾರೆಂದು ತಿಳಿಸಿದಾಗ ನಾನು ಪ್ರಗತಿ ಪರಿಶೀಲನಾ ಸಭೆ ನಡೆಸುತ್ತಿದ್ದೆ, ಆ ಕೂಡಲೇ ಪೋಲೀಸ್ ಅಧೀಕ್ಷಕರನ್ನು ದೂರವಾಣಿಯಲ್ಲಿ ಸಂಪರ್ಕಿಸಿದಾಗ ಅವರು ಮಹಜರ್ ಮಾಡಿ ಕೊಡುವುದಾಗಿ ತಿಳಿಸಿದ್ದರು, ಆದರೆ ಈವರೆಗೆ ಕೊಟ್ಟಿರುವುದಿಲ್ಲ; ಈ ಬಗ್ಗೆ ಮಾನ್ಯ ಅಧ್ಯಕ್ಷರು ಮತ್ತು ವಾಹನ ಚಾಲಕರ ಲಿಖಿತ ಹೇಳಿಕೆ ಪಡೆಯಬೇಕಾಗಿದ್ದು, ಉಳಿದಂತೆ ಉಪ ಕಾರ್ಯದರ್ಶಿ(ಆಡಳಿತ) ಇವರು ಎಲ್ಲಾ ಮಾಹಿತಿ ಪಡೆದಿರುತ್ತಾರೆ; ತ್ವರಿತವಾಗಿ ವಾಹನವನ್ನು ಬಿಡಿಸಿಕೊಂಡು ತರಲಾಗುವುದು ಎಂದು ಸಬೆಗೆ ಕೂಲಂಕುಷ ಮಾಹಿತಿ ನೀಡಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ಜಿಲ್ಲಾ ಪಂಚಾಯತ್ ಅಧ್ಯಕ್ಷರ ಮೇಲೆ ವಿನಾಕಾರಣ ಪ್ರಕರಣ ದಾಖಲಾಗಿದೆ, ಭೂಸ್ವಾಧೀನ ಕಾಯ್ದೆ ಪ್ರಕಾರ 4(1), 6(1) ನೋಟಿಫಿಕೇಷನ್ ಪ್ರಕಾರ ಆಗಬೇಕು, ಪಂಚಾಯತ್ ರಾಜ್ ಅಧಿನಿಯಮ 1999ರ ನಿಯಮ 237(73)ರ ಪ್ರಕಾರ ಆಡಳಿತದಲ್ಲಿ ಪ್ರೊಸೀಜರ್ ಲ್ಯಾಪ್ಸ್ ಆಗಿದೆ, ಮತ್ತೊಮ್ಮೆ ಇಂತಹ ಘಟನೆಗಳು ಪುನರಾವರ್ತನೆಯಾಗಬಾರದು ಎಂದು ಸಭೆಯ ಗಮನಕ್ಕೆ ತಂದರು.

ಮಾನ್ಯ ಜಿ.ಪಂ.ಸದಸ್ಯರಾದ ಡಾ: ರವಿಯವರು ಮಾತನಾಡಿ, ನಿಯಮ 237ರಡಿ ತಾಲ್ಲೂಕು ಪಂಚಾಯತ್ ಅಧ್ಯಕ್ಷರು ಮಾಡಿದ ಆದೇಶವನ್ನು ಎತ್ತಿಹಿಡಿಯುವ ಜವಾಬ್ದಾರಿ

ಯಾರದು? ಎಂದು ಪ್ರಶ್ನಿಸಿ, ಇದರಲ್ಲಿ ವೈಯಕ್ತಿಕ ಮಾನ ನಷ್ಟವಾಗಿದೆ ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಪಂಚಾಯತ್ ರಾಜ್ ಅಧಿನಿಯಮ 1993ರಲ್ಲೇ ತೀರ್ಮಾನವಿದೆ, ಆದ್ದರಿಂದ ಈ ಬಗ್ಗೆ ತೀರ್ಮಾನ ತೆಗೆದುಕೊಳ್ಳುವುದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಲ್ಲ, ನಾನು ಆಗಲೇ ಹೇಳಿದ್ದೇನೆ, ಯಾವ ಹಂತದಲ್ಲಿ ನಷ್ಟವಾಗಿದೆ ಎಂಬ ಬಗ್ಗೆ ಪರಿಶೀಲಿಸಲು ವಿಶೇಷ ಜಿಲ್ಲಾಧಿಕಾರಿ ದರ್ಜೆಯ ಅಧಿಕಾರಿಗೆ ಜವಾಬ್ದಾರಿ ವಹಿಸಿದ್ದೇನೆ, ಅವರು ಪರಿಶೀಲಿಸಿ ವರದಿ ನೀಡಿದ ನಂತರ ಮುಂದಿನ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಮುಂದುವರಿದು ಮಾತನಾಡುತ್ತಾ, ಚುನಾಯಿತ ಪ್ರತಿನಿಧಿಗಳು ಕೆಲಸ ಮಾಡುವುದು ಕಷ್ಟವಾಗಿದೆ ಎಂದರೆ, ಅಧಿಕಾರಿಗಳು ಕೆಲಸ ಮಾಡುವುದು ಸಹ ಅಷ್ಟೇ ಕಷ್ಟವಾಗಿದೆ; ಎರಡೂ ಕೈ ಸೇರಿದರೆ ಚಪ್ಪಾಳೆ ಎನ್ನುವ ಹಾಗೆ ಚುನಾಯಿತ ಪ್ರತಿನಿಧಿಗಳು ಮತ್ತು ಅಧಿಕಾರಿಗಳು ಸೇರಿ ಜಿ.ಪಂ.ವ್ಯವಸ್ಥೆಯಲ್ಲಿ ಕೆಲಸ ಮಾಡಬೇಕು ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಸುಧಾಕರಲಾಲ್ ರವರು ಮಾತನಾಡಿ, ಕಾರ್ಯನಿರ್ವಾಹಕ ಅಧಿಕಾರಿ, ಕುಣಿಗಲ್ ರವರನ್ನು ಸೇವೆಯಿಂದ ಅಮಾನತ್ತುಪಡಿಸುವ ಕುರಿತು ಏನು ಕ್ರಮ ಕೈಗೊಂಡಿದ್ದೀರಿ? ಎಂದು ಕೇಳಲಾಗಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಉಪ ಕಾರ್ಯದರ್ಶಿ(ಆಡಳಿತ)ರವರು ವಸ್ತುಸ್ಥಿತಿಯ ಬಗ್ಗೆ ಪರಿಶೀಲಿಸಿ ವರದಿ ಸಲ್ಲಿಸಿದ ನಂತರ ಸದರಿ ವರದಿಯನ್ನು ಪರಿಶಿಲಿಸಿ, ಮುಂದಿನ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಸುದೀರ್ಘ ಚರ್ಚೆಯ ನಂತರ ದಿನಾಂಕ 29-11-2012ರಂದು ನಡೆದ ಸಾಮಾನ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.

**ಸಿ) ದಿನಾಂಕ:29-11-2012ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು:**

ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯ ಅಧ್ಯಕ್ಷರು ಮಾತನಾಡಿ, ಅನುಮೋದನೆಗಾಗಿ ದಿನಾಂಕ:29-11-2012ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಸಭೆಗೆ ಮಂಡಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿರವರು ಮಾತನಾಡಿ, ಕೊರಟಗೆರೆ ತಾಲ್ಲೂಕಿನ ಹೊಳವನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಮಹಿಳಾ ವೈದ್ಯರ ಅಗತ್ಯವಿದ್ದು ಅಲ್ಲಿಗೆ ವೈದ್ಯರನ್ನು ನಿಯೋಜಿಸಿ ಕಾರ್ಯನಿರ್ವಹಿಸಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಯ ಗಮನಕ್ಕೆ ತಂದರು. ಈಗಿರುವ ಡಾ:ರಮೇಶ್ ರವರು ಸಾರ್ವಜನಿಕರಿಗೆ ಸ್ಪಂದಿಸುತ್ತಿಲ್ಲ. ಅವರು ಸರಿಯಾಗಿ ಕರ್ತವ್ಯ ನಿರ್ವಹಿಸಲು ಅಗತ್ಯ ಕ್ರಮಕೈಗೊಳ್ಳಲು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಹುದ್ದೆ ಸ್ಥಳಾಂತರಕ್ಕೆ ನನಗೆ ಅಧಿಕಾರವಿಲ್ಲ. ಆ ಅಧಿಕಾರವನ್ನು ಸರ್ಕಾರದ ಕಾರ್ಯದರ್ಶಿಯವರು ಮೊಟಕುಗೊಳಿಸಿರು ವುದರಿಂದ ಸಧ್ಯಕ್ಕೆ ಕೋಳಾಲದ ವೈದ್ಯರು, ಸರದಿಯಂತೆ ಕೋಳಾಲ ಮತ್ತು ಹೊಳವನಹಳ್ಳಿ ಎರಡೂ ಕಡೆ ಕಾರ್ಯನಿರ್ವಹಿಸುವಂತೆ ಈಗಾಗಲೇ ಆದೇಶ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಡಾ:ರವಿಯವರು ಮಾತನಾಡಿ, ಕುಣಿಗಲ್ ತಾಲ್ಲೂಕಿನ ಅಮೃತೂರು ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ವೈದ್ಯರ ಕೊರತೆಯಿದೆ. ಹಾಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಲ್ಲಿಗೂ ಸಹ ಒಬ್ಬ

ಮಹಿಳಾ ವೈದ್ಯರ ಅವಶ್ಯಕತೆ ಇದ್ದು ವೈದ್ಯರ ವ್ಯವಸ್ಥೆ ಮಾಡಬೇಕೆಂದು ಕೋರಿದರು. ಹಾಗೂ ಎಲ್ಲೆಲ್ಲಿ ವೈದ್ಯರ ಕೊರತೆ ಇದೆಯೋ ಅಲ್ಲಿಗೆ ನಿವೃತ್ತಿಹೊಂದಿರುವ 60ವರ್ಷ ಮೇಲ್ಪಟ್ಟ ಅಪೇಕ್ಷೆಯುಳ್ಳ ವೈದ್ಯರನ್ನು ನೇಮಕ ಮಾಡಿದರೆ ಸಧ್ಯದ ಪರಿಸ್ಥಿತಿ ಸುಧಾರಿಸಬಹುದು ಎಂದು ಅಭಿಪ್ರಾಯಿಸಿದರು.

ಅಧ್ಯಕ್ಷರು, ತಾಲ್ಲೂಕು ಪಂಚಾಯತ್, ತುರುವೇಕೆರೆ ಇವರು ಮಾತನಾಡಿ, ತುರುವೇಕೆರೆ ತಾಲ್ಲೂಕಿನ ದಬ್ಬೇಘಟ್ಟ ಆಸ್ಪತ್ರೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ರೋಗಿಗಳ ಶೌಚಾಲಯ ದನಗಳ ಕೊಟ್ಟಿಗೆಯಾಗಿದೆ, ಅಲ್ಲದೆ ಸದರಿ ಆಸ್ಪತ್ರೆಯಲ್ಲಿ ವೈದ್ಯಾಧಿಕಾರಿ/ಸಿಬ್ಬಂದಿ ಇರುವುದಿಲ್ಲ, ಈ ಕುರಿತು ವ್ಯವಸ್ಥೆ ಮಾಡಬೇಕೆಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಕೆಂಚಮಾರಯ್ಯನವರು ಮಾತನಾಡಿ, ಮಧುಗಿರಿ ತಾಲ್ಲೂಕು ಮಿಡಿಗೇಶಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಒಬ್ಬ ಆಯುರ್ವೇದಿಕ್ ವೈದ್ಯರಿರುತ್ತಾರೆ, ಅದು ದೊಡ್ಡ ಹೋಬಳಿಯಾಗಿರುವುದರಿಂದ ಒಬ್ಬ ಪುರುಷ ಮತ್ತು ಮಹಿಳಾ ವೈದ್ಯರ ಅವಶ್ಯಕತೆಯಿರುತ್ತದೆ, ಆದುದರಿಂದ ವಾರದ ಏಳೂ ದಿನಗಳಿಗೆ ರೊಟೇಷನ್ ವ್ಯವಸ್ಥೆ ಮಾಡಬೇಕೆಂದು ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿಯವರು ಮಾತನಾಡಿ, ಕೊರಟಗೆರೆ ತಾಲ್ಲೂಕು ಹೊಳವನಹಳ್ಳಿಗೆ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರದ ಅವಶ್ಯಕತೆ ಇರುತ್ತದೆ. ಅದಕ್ಕಾಗಿ 2002ರಲ್ಲಿ ಜಾಗವನ್ನು ಸಹ ನೀಡಲಾಗಿದೆ, ಆದ್ದರಿಂದ ಈ ಕುರಿತು ಪರಿಶೀಲಿಸಿ ಅಗತ್ಯ ಕ್ರಮವಹಿಸಬೇಕು; ತಾಲ್ಲೂಕಿನ ಅಕ್ಕಿರಾಂಪುರದಲ್ಲಿ ಆರೋಗ್ಯ ಇಲಾಖೆ ವತಿಯಿಂದ ನಡೆಯುತ್ತಿರುವ ಪ್ರಾಥಮಿಕ ಆರೋಗ್ಯ ಘಟಕವನ್ನು ಮೇಲ್ದರ್ಜೆಗೇರಿಸಲು (PHC) ಈಗಾಗಲೇ ರೂ.1.00 ಲಕ್ಷ ಹಣವನ್ನು ಕಟ್ಟಿರುತ್ತಾರೆ, ಆದರೆ ಈ ವರೆವಿಗೆ ಕೆಲಸವಾಗಿಲ್ಲ ಹಣವನ್ನೂ ವಾಪಸ್ ಕೊಟ್ಟಿಲ್ಲ; ಈ ಕುರಿತು ಏನು ಮಾಡುತ್ತೀರಿ? ಎಂದು ಕೇಳಲಾಗಿ, ಸಭೆಯಲ್ಲಿ ಹಾಜರಿದ್ದ ಆರೋಗ್ಯ ಇಲಾಖೆಯ ಅಧಿಕಾರಿಯವರು ಮಾತನಾಡಿ, ಈ ಕುರಿತು ಸರ್ಕಾರಕ್ಕೆ ಪತ್ರ ಬರೆಯಲಾಗಿತ್ತು, ಆದರೆ ಮುಂದಿನ ಮೂರು ವರ್ಷಗಳವರೆಗೆ ಯಾವುದೇ ಹೊಸ ಆಸ್ಪತ್ರೆ ಮಂಜೂರಾತಿಗೆ ಅವಕಾಶವಿಲ್ಲವೆಂದು ಇಲಾಖಾ ಸಹ ನಿರ್ದೇಶಕರಿಂದ ಪತ್ರ ಬಂದಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಡಾ: ರವಿಯವರು ಮಾತನಾಡಿ, ಜಿಲ್ಲೆಯಲ್ಲಿ ಎಲ್ಲೆಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅವಶ್ಯಕತೆಯಿದೆ ಎಂಬ ಬಗ್ಗೆ ಒಂದು ಪಟ್ಟಿ ತಯಾರಿಸಿ ಸರ್ಕಾರಕ್ಕೆ ಪಸ್ತಾವನೆಯನ್ನು ಕಳುಹಿಸಿಕೊಡಬೇಕೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಕೋರಲಾಗಿ, ಈ ಬಗ್ಗೆ ಕ್ರಮವಹಿಸಲಾಗುವುದೆಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ತಿಳಿಸಿದರು. ಅಲ್ಲದೆ, ಯಾರಾದರೂ ಪ್ರಸೂತಿ ತಜ್ಞರು ಕೆಲಸ ಮಾಡಲು ಮುಂದೆ ಬರುವುದಾದಲ್ಲಿ ಪಟ್ಟಿ ನೀಡಿದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಿಕೊಡುವ ವ್ಯವಸ್ಥೆ ಮಾಡಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಡಾ: ರವಿಯವರು ಮಾತನಾಡಿ, ಈ ಹಿಂದೆ ಕುಣಿಗಲ್ ತಾಲ್ಲೂಕು ಕೊಡವತ್ತಿ, ಚೊಟ್ಟನಹಳ್ಳಿ ಗ್ರಾಮಗಳಿಗೆ ಮಂಜೂರಾದ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಲ್ಯಾಪ್ಸ್ ಆಗಿದ್ದು, ಈ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸ ನಿರ್ವಹಿಸಲು ಆಸಕ್ತಿ ಹೊಂದಿರುವ ವೈದ್ಯರುಗಳ ಬಗ್ಗೆ ಮಾಹಿತಿ ಒದಗಿಸುವಂತೆ ಡಿ.ಹೆಚ್.ಓ.ರವರಿಗೆ ತಿಳಿಸಿದರು. ಮುಂದುವರೆದು ಮಾತನಾಡುತ್ತಾ, ಪ್ರಸೂತಿ ತಜ್ಞರ ನೇಮಕಾತಿ ಸಂಬಂಧ ನಮಗೆ ಬಂದ ನಾಲ್ಕು ಪ್ರಸ್ತಾವನೆಗಳಿಗೆ ಸರ್ಕಾರದಿಂದ ಅನುಮೋದನೆ ಪಡೆಯಲಾಗಿದ್ದು, ಅವರುಗಳು ಕೆಲಸ ನಿರ್ವಹಿಸುತ್ತಿದ್ದಾರೆ; ಡಿಸ್ಟ್ರಿಕ್ಟ್ ಸೋಷಿಯಲ್ ಸೊಸೈಟಿಯಿಂದ ಹುದ್ದೆಗಳನ್ನು ಅನುಮೋದನೆ ಮಾಡುತ್ತಾರೆ, ಅದರ ಮೂಲಕ ವೇತನ ಕೊಡುತ್ತೇವೆ ಎಂದು ಸಭೆಗೆ ತಿಳಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಜಿಲ್ಲೆಯಲ್ಲಿ ಪ್ರಸೂತಿ ತಜ್ಞರ ಹದಿನಾಲ್ಕು ಹುದ್ದೆಗಳು ಖಾಲಿಯಿದ್ದು, ನೇಮಕಾತಿ ಕೋರಿ ಬಂದ ಐದು ಅರ್ಜಿಗಳಲ್ಲಿ ಒಂದು ಅರ್ಜಿ ತಿರಸ್ಕೃತವಾಗಿ ನಾಲ್ಕು ಅರ್ಜಿಗಳು ಚಾಲನೆಯಲ್ಲಿರುತ್ತವೆ; ಇನ್ನೂ ಹತ್ತು ಹುದ್ದೆಗಳು ಖಾಲಿಯಿರುವುದರಿಂದ ಸೂಕ್ತ ಪ್ರಸ್ತಾವನೆ ಸಲ್ಲಿಸಿದಲ್ಲಿ ಇಲಾಖಾ ಆಯುಕ್ತರಿಗೆ ಕಳುಹಿಸಿ ಕೊಡಲಾಗುವುದೆಂದು ತಿಳಿಸಿದರು.

ಜಿ.ಪಂ.ಮಾನ್ಯ ಸದಸ್ಯರಾದ ಡಾ: ರವಿಯವರು ಮಾತನಾಡಿ, ನಿವೃತ್ತ ವೈದ್ಯರುಗಳ ಪ್ರಸ್ತಾವನೆಯನ್ನು ನೀಡಬಹುದೆ? ಎಂದು ಕೇಳಲಾಗಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಆಗಬಹುದೆಂದರು. ಮುಂದುವರೆದು, ಪಾವಗಡ ತಾಲ್ಲೂಕಿನ ತಿರುಮಣಿಯಲ್ಲಿ ಕ್ಷ-ಕಿರಣ ತಂತ್ರಜ್ಞ ಮತ್ತು ಡಿ-ದರ್ಜೆ ನೌಕರ ನನ್ನು ಬಿಟ್ಟರೆ ಬೇರೆ ಸಿಬ್ಬಂದಿ ಇರುವುದಿಲ್ಲ, ಇದರಿಂದ ವೈ.ಎನ್.ಹೊಸಕೋಟೆ ಪಿ.ಹೆಚ್.ಸಿ.ಯಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯಾಧಿಕಾರಿ ಯವರನ್ನು ವಾರದಲ್ಲಿ ಮೂರು ದಿನ ತಿರುಮಣಿಯಲ್ಲಿ ಕೆಲಸ ನಿರ್ವಹಿಸಲು ಸೂಚಿಸಲಾಗಿದೆ. ಇಂತಹ ಯಾವುದೇ ಪ್ರಸ್ತಾವನೆ ಇದ್ದಲ್ಲಿ, ಆರೋಗ್ಯ ಇಲಾಖೆಯ ಸಭೆಯಲ್ಲಿ ಪರಿಶೀಲಿಸಿ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು. ಈ ಸಂಬಂಧ ಸಭೆಯಲ್ಲಿ ಹಾಜರಿದ್ದ ಆರೋಗ್ಯ ಇಲಾಖೆಯ ಅಧಿಕಾರಿಯವರು ಮಾತನಾಡಿ, ತಂಡಗ ಮತ್ತು ಅದಲಗೆರೆ ಪಿ.ಹೆಚ್.ಸಿ.ಗಳಿಗೆ ವೈದ್ಯರ ಹುದ್ದೆಗಳಿಗೆ ಪ್ರಸ್ತಾವನೆ ಬಂದಿರುವುದಾಗಿ ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಡಾ: ರವಿಯವರು ಮಾತನಾಡಿ, ಎಂ.ಬಿ.ಬಿ.ಎಸ್. ವ್ಯಾಸಂಗ ಮುಗಿದ ನಂತರ ಒಂದು ವರ್ಷ ಗ್ರಾಮೀಣ ಪ್ರದೇಶದಲ್ಲಿ ಕೆಲಸ ನಿರ್ವಹಿಸಬೇಕೆಂಬ ಸರ್ಕಾರದ ಆದೇಶ ಇದಕ್ಕೆ ಪರ್ಯಾಯ ವ್ಯವಸ್ಥೆಯಾಗಬಹುದು, ಆದ್ದರಿಂದ ಈ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಸೂಕ್ತ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಶಿರಾ ತಾಲ್ಲೂಕಿನ ಪಟ್ಟನಾಯಕನ ಹಳ್ಳಿ ಪಿ.ಹೆಚ್.ಸಿ. ಸುಸಜ್ಜಿತವಾಗಿದ್ದು, ಸದರಿ ಪಿ.ಹೆಚ್.ಸಿ.ಯನ್ನು ಮೇಲ್ದರ್ಜೆಗೇರಿಸಬೇಕು; ಅಲ್ಲಿ ಹಾವು ಕಡಿತದ ಔಷಧಿ ಸಿಗುತ್ತಿಲ್ಲ, ಸದರಿ ಪಿ.ಹೆಚ್.ಸಿ.ಯನ್ನು ಶ್ರೀದೇವಿ ಗ್ರೂಪ್ಸ್ ಗೆ ವಹಿಸಿಕೊಡುವ ಬಗ್ಗೆ ಪ್ರಸ್ತಾಪವನ್ನು ಮುಂದಿಟ್ಟಿದ್ದಾರೆ, ಇದನ್ನು ಕೈಬಿಡಬೇಕು; ಪ್ರಸ್ತುತ ಕರುಣಾ ಟ್ರಸ್ಟ್ ನವರು ವಹಿಸಿಕೊಂಡಿರುವ ಪಿ.ಹೆಚ್.ಸಿ.ಗಳನ್ನು ಸರ್ಕಾರಿ ಆಸ್ಪತ್ರೆಗಳಿಗಿಂತ ಹೀನಾಯ ಸ್ಥಿತಿಯಲ್ಲಿ ನಡೆಸುತ್ತಿದ್ದಾರೆ, ಈ ಕುರಿತು ಪರಿಶೀಲಿಸಬೇಕು ಎಂದು ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಜಗದೀಶ್ ರವರು ಮಾತನಾಡಿ, ಪಿ.ಹೆಚ್.ಸಿ.ಗಳನ್ನು ಖಾಸಗಿಯವರಿಗೆ ವಹಿಸುವ ಪ್ರಸ್ತಾವನೆಯನ್ನು ಆರೋಗ್ಯ ಇಲಾಖೆಯವರೇ ಮುಂದಿಟ್ಟಿದ್ದರು ಎಂದು ಸಭೆಗೆ ತಿಳಿಸಿದರು. ಡಿ.ಹೆಚ್.ಓ.ರವರು ಮಾತನಾಡಿ, ಶ್ರೀದೇವಿ ಗ್ರೂಪ್ಸ್ ನವರು ಮೂರು

ಪಿ.ಹೆಚ್.ಸಿ.ಗಳನ್ನು ಕೇಳಿದ್ದಾರೆ, ಈ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುತ್ತಿದೆ, ಪ್ರಸ್ತಾವನೆ ಅನುಮೋದನೆಯಾಗಿ ಬಂದ ನಂತರ ವಹಿಸಿಕೊಡಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಡಾ: ರವಿಯವರು ಮಾತನಾಡಿ, ಕೆಸ್ತೂರು ಕ್ಯಾತ್ಸಂದ್ರ ಮತ್ತು ಕೋರಾ ಪಿ.ಹೆಚ್.ಸಿ.ಗಳನ್ನು ವಹಿಸಿಕೊಡಲು ಕೇಳಿರುತ್ತಾರೆ, ಆದರೆ ಸದರಿ ಪಿ.ಹೆಚ್.ಸಿ.ಗಳಲ್ಲಿ ಮೂಲಭೂತ ಸೌಕರ್ಯ ಇರುತ್ತದೆ, ಆದ್ದರಿಂದ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸುವ ಮುನ್ನ ಪರಿಶೀಲಿಸಬೇಕಾಗುತ್ತದೆ ಎಂದು ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಸಿ.ಆರ್. ಉಮೇಶ್ ರವರು ಮಾತನಾಡಿ, ಕೇವಲ ಗ್ರಾಮೀಣ ಭಾಗದ ಪಿ.ಹೆಚ್.ಸಿ.ಗಳನ್ನು ಮಾತ್ರ ಖಾಸಗಿಯವರಿಗೆ ವಹಿಸಿಕೊಡಬೇಕು ಎಂದು ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀಮತಿ ಶಾಂತಲಾ ರಾಜಣ್ಣನವರು ಮಾತನಾಡಿ, ಕುರಿಪಾಳ್ಯ ಪಿ.ಹೆಚ್.ಸಿ.ಯನ್ನು ಕೇಳಿರುತ್ತಾರೆ, ಅಲ್ಲಿಯೂ ಸಹ ಮೂಲಭೂತ ಸೌಕರ್ಯ ಬಹಳ ಚೆನ್ನಾಗಿರುತ್ತದೆ ಎಂದು ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಅಂಜಿನಪ್ಪನವರು ಮಾತನಾಡಿ, ಶ್ರೀದೇವಿ ಗ್ರೂಪ್ಸ್ ನವರು ಕೇಳಿರುವ ಆರು ಪಿ.ಹೆಚ್.ಸಿ.ಗಳ ಪೈಕಿ ಗ್ರಾಮಾಂತರ ಭಾಗದಲ್ಲಿರುವ ಮೂರು ಪಿ.ಹೆಚ್.ಸಿ. ಗಳ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಕಳುಹಿಸಿಕೊಡಲು ಅಗತ್ಯ ಕ್ರಮವಹಿವಹಿಸಬೇಕೆಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಈ ಸಂಬಂಧ ತಾಂತ್ರಿಕವಾಗಿ ಪರಿಶೀಲಿಸಿ ಲಗತ್ತಾಗಿರುವ ಪಿ.ಹೆಚ್.ಸಿ.ಗಳನ್ನು ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿಯಲ್ಲಿ ತೀರ್ಮಾನಿಸಿದಂತೆ ಪಟ್ಟಿ ನೀಡಲು ಸೂಚಿಸಿದರು.

**(ಕ್ರಮ : ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ, ತುಮಕೂರು)**

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಪಿ.ಆರ್.ಸುಧಾಕರ್ ಲಾಲ್ ರವರು ಮಾತನಾಡಿ, ಜಿಲ್ಲೆಯಲ್ಲಿ ಅಪೌಷ್ಟಿಕತೆಯಿಂದ ಬಹಳಷ್ಟು ಮಕ್ಕಳು ಸಾವನ್ನಪ್ಪುತ್ತಿರುವುದು ನಾಚಿಕೆಗೇಡಿನ ವಿಷಯವಾಗಿದ್ದು, ಈ ಬಗ್ಗೆ ಏನು ಕ್ರಮವಹಿಸಲಾಗಿದೆ ಎಂದು ಪ್ರಶ್ನಿಸಿದರು? .

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀಮತಿ ಲೋಹಿತಾಬಾಯಿಯವರು ಮಾತನಾಡಿ, ಚಿ.ನಾ.ಹಳ್ಳಿ ತಾಲ್ಲೂಕಿನ ಗೋಡೆಕೆರೆ ಗ್ರಾಮದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ವತಿಯಿಂದ ನಡೆಸಲಾಗುತ್ತಿರುವ ಶ್ರೀ ರಂಬಾಪುರಿ ವಿದ್ಯಾ ಸಂಸ್ಥೆಗೆ ದಿನಾಂಕ:25-12-2012 ರಂದು ಭೇಟಿ ನೀಡಿ ಪರಿಶೀಲಿಸಲಾಗಿ, ಸದರಿ ಸಂಸ್ಥೆಯಲ್ಲಿ 25ಮಕ್ಕಳಿದ್ದು ಪ್ರತಿ ಮಗುವಿಗೆ ಮಾಸಿಕ ನಿರ್ವಹಣಾ ಶುಲ್ಕ ರೂ.350/- ನೀಡುತ್ತಿರುವುದಾಗಿ ತಿಳಿದು ಬಂದಿದ್ದು ಇದರ ಬದಲು ಮಾಸಿಕ ರೂ.600/-ಗಳನ್ನು ನೀಡಿದರೆ ಒಳ್ಳೆಯದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರು ಮಾತನಾಡಿ, ಪ್ರಸ್ತುತ ಜಿಲ್ಲೆಯಲ್ಲಿ 1580ಮಕ್ಕಳು ಅಪೌಷ್ಟಿಕತೆಯಿಂದ ಬಳಲುತ್ತಿದ್ದು, ಈ ಕುರಿತು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖಾವತಿಯಿಂದ ಕಾಲಕಾಲಕ್ಕೆ ತಪಾಸಣೆ ಮಾಡಿಸುತ್ತಿದ್ದೇವೆ; ವಾರ್ಷಿಕ ರೂ.750/- ಮೊತ್ತದ ಔಷಧಿಗಳನ್ನು ನೀಡುತ್ತಿದ್ದೇವೆ; ತೀವ್ರ ಅಪೌಷ್ಟಿಕತೆಯಿಂದ ಬಳಲುತ್ತಿರುವ ಮಕ್ಕಳನ್ನು ವೈದ್ಯಾಧಿಕಾರಿಗಳಿಗೆ ತೋರಿಸಿ, ಅಗತ್ಯವಿದ್ದಲ್ಲಿ NRC ಕೇಂದ್ರಕ್ಕೆ ದಾಖಲು ಮಾಡುತ್ತಿದ್ದೇವೆ; ಈ ಸಂದರ್ಭದಲ್ಲಿ ಪೋಷಕರಿಗೆ MGNREGA ಅಡಿ ಕೂಲಿ ಕೊಡುತ್ತೇವೆ; ಮಕ್ಕಳನ್ನು ಆರೈಕೆ ಮಾಡುತ್ತಿದ್ದೇವೆ ಹಾಗೂ ಹೆಚ್ಚಿನ ಚಿಕಿತ್ಸೆ

ಅವಶ್ಯವಿದ್ದಲ್ಲಿ, ಬೆಂಗಳೂರಿನ ಇಂದಿರಾಗಾಂಧಿ ಮಕ್ಕಳ ಆಸ್ಪತ್ರೆಯಲ್ಲಿ ಉಚಿತ ಚಿಕಿತ್ಸೆಗೆ ಅವಕಾಶವಿದೆ; ಈ ವರೆಗೆ 197 ಮಕ್ಕಳಿಗೆ ಸುಮಾರು ರೂ. 22.00 ಲಕ್ಷದಷ್ಟು ಮೊತ್ತಕ್ಕೆ ಚಿಕಿತ್ಸೆ ಕೊಡಿಸಿದ್ದೇವೆ; ಪ್ರತಿ ತಿಂಗಳು ಮಕ್ಕಳ ಗ್ರೇಡ್ ಗುರುತಿಸುತ್ತಿದ್ದೇವೆ ; ಅನಾಥ ಮಕ್ಕಳ ಕುಟೀರಕ್ಕೆ ಸಂಬಂಧಿಸಿದಂತೆ ಗೋಡೆಕೆರೆ ಯಲ್ಲಿ ನಡೆಯುತ್ತಿರುವ ಶ್ರೀ ರಂಭಾಪುರ ವಿದ್ಯಾ ಸಂಸ್ಥೆಯಲ್ಲಿನ 50 ಮಕ್ಕಳಿಗೆ ಸರ್ಕಾರದಿಂದ ರೂ.450/-ಗಳನ್ನು ನೀಡುತ್ತಿದ್ದು ಈ ಮೊತ್ತದ ಹೆಚ್ಚಳಕ್ಕೆ ಮುಂದಿನ ಸಾಲಿನಲ್ಲಿ ನಿರ್ಧರಿಸಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

**(ಕ್ರಮ: ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ತುಮಕೂರು)**

ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಶಿರಾ ನಗರದ ಹೃದಯ ಭಾಗದಲ್ಲಿರುವ ಉರ್ದು ಶಾಲೆಯಲ್ಲಿಹಿಂದುಳಿದ ವರ್ಗಕ್ಕೆ ಸೇರಿದ 198 ಮಕ್ಕಳು ವ್ಯಾಸಂಗ ಮಾಡುತ್ತಿದ್ದು ಸದರಿ ಶಾಲೆಯಲ್ಲಿ 7 ಕೊಠಡಿಗಳಿದ್ದು ಶಿಥಿಲಾವಸ್ಥೆಯಲ್ಲಿರುತ್ತವೆ. ಬಿಸಿಲು-ಮಳೆಯಿಂದ ಮಕ್ಕಳು ಕೊಠಡಿಗಳಲ್ಲಿ ಕೂರಲಾಗುವುದಿಲ್ಲ; ಈ ಕುರಿತು ನಿನ್ನೆ ಸದರಿ ಶಾಲೆಗೆ ಭೇಟಿ ನೀಡಿ ಪರಿಶೀಲಿಸಿ ಚರ್ಚಿಸಿದ ಸಂದರ್ಭದಲ್ಲಿ ಸದರಿ ಕಟ್ಟಡವು ಗುತ್ತಿಗೆಯದ್ದಾಗಿರುವುದರಿಂದ ಯಾವುದೇ ದುರಸ್ಥಿ ಮಾಡಿಸಲು ಆಗುವುದಿಲ್ಲ; ಶಾಲೆಗೆ ಸ್ವಂತ ಜಾಗವಿಲ್ಲದೆ ಇರುವುದರಿಂದ ಸರ್ವ ಶಿಕ್ಷಣ ಅಭಿಯಾನ ಅಧಿಕಾರಿಗಳೊಂದಿಗೆ ಸಂಪರ್ಕಿಸಿ ರೇಷ್ಮೆ ಇಲಾಖೆ ವತಿಯಿಂದ ಈ ಜಾಗವನ್ನು ಗುತ್ತಿಗೆಗೆ ಪಡೆಯಲಾಗಿರುತ್ತದೆ ಎಂದು ತಿಳಿಸಿರುತ್ತಾರೆ; ಈ ಬಗ್ಗೆ ಸರ್ಕಾರಕ್ಕೆ ಠರಾವು ಕಳುಹಿಸಿ ಸದರಿ ಜಾಗವನ್ನು ಶಿಕ್ಷಣ ಇಲಾಖೆಗೆ ವಹಿಸಿಕೊಡಲು ಕೋರಿ ಅಗತ್ಯ ಪ್ರಸ್ತಾವನೆ ಸಲ್ಲಿಸಬೇಕೆಂದು ಸಭೆಗೆ ತಿಳಿಸಿದರು.

ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ತುಮಕೂರು ರವರು ಮಾತನಾಡಿ, ಉರ್ದು ಶಾಲೆಯ ದುರಸ್ಥಿ ಅಗತ್ಯವಿದ್ದು, ರೇಷ್ಮೆ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚಿಸಿ ಜಿಲ್ಲಾ ಪಂಚಾಯತಿಯಿಂದ ಪ್ರಸ್ತಾವನೆ ಸಲ್ಲಿಸಿದ್ದಲ್ಲಿ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಕ್ರಮವಹಿಸಬಹುದಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಡಾ:ರವಿ ರವರು ಮಾತನಾಡಿ, ಮಕ್ಕಳಲ್ಲಿ ಅಪೌಷ್ಠಿಕತೆ ಜಾಸ್ತಿಯಾಗುತ್ತಿದ್ದು ಎರಡು-ಮೂರು ತಿಂಗಳುಗಳಾದರೂ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಂಡಿರುತ್ತದೆ. ಈ ಕುರಿತು ಮಾನ್ಯ ಜಿಲ್ಲಾಧಿಕಾರಿಯವರೊಂದಿಗೆ ಸಮಾಲೋಚಿಸಿ ಕ್ರಮವಹಿಸಬೇಕು; ಕೇಂದ್ರ ಸರ್ಕಾರದ ಅನುದಾನದಿಂದ ತಾಲ್ಲೂಕಿನ ಗಜ್ಜನಕಟ್ಟೆ, ಬಾಳೆಕಟ್ಟೆ ಗ್ರಾಮಗಳಲ್ಲಿ ನಿರ್ಮಿಸಲಾಗಿರುವ ಶಾಲಾ ಕೊಠಡಿಗಳು ಖಾಲಿ ಇರುತ್ತವೆ; ಇಂತಹ ಕೊಠಡಿಗಳನ್ನು ಅಂಗನವಾಡಿ ಕೇಂದ್ರಗಳಿಗೆ ಬಳಸಿಕೊಳ್ಳಬಹುದಾಗಿರುತ್ತದೆ; ದೊಡ್ಡಕಲ್ಲಹಳ್ಳಿ ಗ್ರಾಮದಲ್ಲಿ 2007-08ನೇ ಸಾಲಿನಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸಲಾಗಿದ್ದು, ಅದನ್ನು ಈವರೆಗೆ ಇಲಾಖಾ ವಶಕ್ಕೆ ಪಡೆದಿರುವುದಿಲ್ಲ ಎಂದು ಸಭೆಗೆ ತಿಳಿಸಿದರು. ಪ್ರತಿಯಾಗಿ ಸಭೆಯ ಮಾನ್ಯ ಅಧ್ಯಕ್ಷರು ಖಾಲಿ ಇರುವ ಶಾಲಾ ಕೊಠಡಿಗಳನ್ನು ಅಂಗನವಾಡಿ ಕೇಂದ್ರಕ್ಕೆ ಬಾಡಿಗೆಗೆ ಪಡೆಯಲು ತಿಳಿಸಿದ್ದಾಗ್ಯೂ ಸಹ ಈವರೆಗೆ ಏಕೆ ಕ್ರಮವಹಿಸಿಲ್ಲವೆಂದು ಪ್ರಶ್ನಿಸಿದರು.

ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ರವರು ಮಾತನಾಡಿ, ಈ ಕುರಿತು ಸಂಬಂಧ ಪಟ್ಟ ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರೊಂದಿಗೆ ಸಮಾಲೋಚಿಸಿ ಮಾಹಿತಿ ಒದಗಿಸುವುದಾಗಿ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ಸುಮಾರು 34 ಶಾಲೆಗಳು ಮುಚ್ಚಲ್ಪಟ್ಟಿದ್ದು, ಸದರಿ ಶಾಲಾ ಕೊಠಡಿಗಳನ್ನು ಅಂಗನವಾಡಿಗಳಿಗೆ ಬಳಸಿಕೊಳ್ಳಬಹುದಾಗಿರುತ್ತದೆ. ಗ್ರಾಮ ಪಂಚಾಯತಿಯಿಂದ ಪಟ್ಟಿ ಪಡೆದು ಸಲ್ಲಿಸಿದಲ್ಲಿ ಆದೇಶ ನೀಡಲಾಗುವುದು. ಈ ಸಂಬಂಧ ಎರಡೂ ಶೈಕ್ಷಣಿಕ ಜಿಲ್ಲೆಗಳ ಉಪ ನಿರ್ದೇಶಕರುಗಳು ಮತ್ತು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಸೇರಿ ತಾತ್ಕಾಲಿಕ ವ್ಯವಸ್ಥೆಗೆ ಮೂರು ದಿನದೊಳಗಾಗಿ ಪಟ್ಟಿ ಒದಗಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷರು, ತಾಲ್ಲೂಕು ಪಂಚಾಯತಿ, ಗುಬ್ಬಿ ರವರು ಮಾತನಾಡಿ, ಗುಬ್ಬಿ ತಾಲ್ಲೂಕು ಬಿಕ್ಕೆಗುಡ್ಡ ಗ್ರಾಮದಲ್ಲಿ ಸಮಾಜ ಕಲ್ಯಾಣ ಇಲಾಖಾವತಿಯಿಂದ ನಡೆಸಲಾಗುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ಶೌಚಾಲಯ ಇರುವುದಿಲ್ಲ, ಅಲ್ಲಿಯೇ ಊಟ-ಪಾಠ-ವಸತಿ ನಡೆಯುತ್ತಿವೆ. ಸದರಿ ಶಾಲೆಯಲ್ಲಿ 50 ಹೆಣ್ಣು ಮಕ್ಕಳಿದ್ದು ಶಾಲೆ ಪ್ರಾರಂಭಗೊಂಡು 5 ವರ್ಷಗಳು ಕಳೆದರೂ ಶಾಲಾ ಕಟ್ಟಡ ಇರುವುದಿಲ್ಲ. ದಯಮಾಡಿ, ಸದರಿ ಶಾಲೆಗೆ ಭೇಟಿ ನೀಡಿ, ಶಾಲೆಯನ್ನು ಬೇರೆಡೆಗೆ ಸ್ಥಳಾಂತರಿಸಲು ಅಗತ್ಯ ಕ್ರಮವಹಿಸಬೇಕೆಂದು ಕೋರಿದರು.

ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮಾತನಾಡಿ, ಗುಬ್ಬಿ ತಾಲ್ಲೂಕಿನ ಬಿಕ್ಕೆಗುಡ್ಡ ಗ್ರಾಮದಲ್ಲಿರುವ ದೇವಸ್ಥಾನದ ಹಿಂಭಾಗದಲ್ಲಿ ನೀಡಲಾಗಿರುವ ಜಾಗದಲ್ಲಿ ಕಳೆದ 5 ವರ್ಷಗಳ ಹಿಂದೆ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಪ್ರಾರಂಭ ಮಾಡಲಾಗಿರುತ್ತದೆ. ಈ ಕುರಿತು ಭೇಟಿ ನೀಡಿ ಪರಿಶೀಲಿಸಿ, ಸದರಿ ಶಾಲೆಯನ್ನು ಬೇರೆಡೆಗೆ ಸ್ಥಳಾಂತರಿಸಲು ಕ್ರಮವಹಿಸಲಾಗಿದ್ದು ಸ್ಥಳೀಯ ಗ್ರಾಮಸ್ಥರು ಸದರಿ ಶಾಲೆಯನ್ನು ಸ್ಥಳಾಂತರಿಸಬಾರದೆಂದು ಚುನಾಯಿತ ಪ್ರತಿನಿಧಿಗಳ ಮತ್ತು ಅಧಿಕಾರಿಗಳ ಮೇಲೆ ಒತ್ತಡ ತಂದಿರುತ್ತಾರೆ. ಆದ್ದರಿಂದ ಈ ಕುರಿತು ಇಂದಿನ ಸಭೆಯಲ್ಲಿ ನಿರ್ಣಯ ಕೈಗೊಂಡಲ್ಲಿ 10ದಿನಗಳ ಒಳಗಾಗಿ ಸದರಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಗುಬ್ಬಿ ಟೌನ್ ಗೆ ಸ್ಥಳಾಂತರಿಸಿ ಕೊಡುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ವೈ.ಹೆಚ್. ಹುಚ್ಚಯ್ಯನವರು ಮಾತನಾಡಿ, ಜಿಲ್ಲಾ ಸಮಾಜ ಕಲ್ಯಾಣ ಇಲಾಖೆ, ಬಿ.ಸಿ.ಎಂ. ಇಲಾಖೆ. ಪ.ವರ್ಗಗಳ ಕಲ್ಯಾಣ ಇಲಾಖೆಗಳ ಅಧಿಕಾರಿಗಳು ಸರಿಯಾಗಿ ಉಸ್ತುವಾರಿ ಮಾಡಿ ಸದರಿ ಮೊರಾರ್ಜಿ ದೇಸಾಯಿ ವಸತಿ ಶಾಲೆ ಕಟ್ಟಡವನ್ನು ಸ್ಥಳಾಂತರಿಸಲು ತುರ್ತು ಗಮನಹರಿಸಬೇಕು; ಕುಣಿಗಲ್ ತಾಲ್ಲೂಕಿನ ಚೌಡನಕುಪ್ಪೆ, ನಾಗನಹಳ್ಳಿ, ನೀಲಸಂದ್ರ ಗ್ರಾಮಗಳಲ್ಲಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲಾ ಕಟ್ಟಡಗಳು ಶಿಥಿಲಗೊಂಡಿದ್ದು ಅವುಗಳನ್ನು ಕೂಡಲೇ ದುರಸ್ಥಿಗೊಳಿಸಿ ಕೊಡಬೇಕು; ನಾಗನಹಳ್ಳಿ ಗ್ರಾಮದ ಅಂಗನವಾಡಿ ಕಟ್ಟಡಕ್ಕೆ ಹಣ ಒದಗಿಸಿಕೊಡಬೇಕು ಎಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸದರಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನು ಒಂದು ವಾರದೊಳಗಾಗಿ ಗುಬ್ಬಿ ಟೌನ್ ಗೆ ಸ್ಥಳಾಂತರಿಸಿ, ಆ ಬಗ್ಗೆ ಸ್ಥಾಯಿ ಸಮಿತಿಯ ಅಧ್ಯಕ್ಷರಿಗೆ ವರದಿ ಮಾಡಿ ಜಿ.ಪಂ.ಗೆ ಮಾಹಿತಿ ಒದಗಿಸುವಂತೆ ಸಭೆಯಲ್ಲಿ ಹಾಜರಿದ್ದ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಯವರಿಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀಮತಿ ದಾಕ್ಷಾಯಿಣಿರವರು ಮಾತನಾಡಿ, ಹೊಳವನಹಳ್ಳಿ ಸರ್ಕಾರಿ ಪ್ರೌಢಶಾಲಾ ಕೊಠಡಿಗಳ ಕಿಟಕಿ, ಬಾಗಿಲುಗಳು ಹಾಳಾಗಿದ್ದು, ಕಟ್ಟಡ ಶಿಥಲಗೊಂಡಿದ್ದು, ಅನೈತಿಕ ಚಟುವಟಿಕೆಗಳ ತಾಣವಾಗಿದೆ ಎಂದು ಸಭೆಯ ಗಮನಕ್ಕೆ ತಂದರು.

ಉಪ ನಿರ್ದೇಶಕರು, ಸಾ.ಶಿ.ಇ. ತುಮಕೂರು ರವರು ಮಾತನಾಡಿ ಸದರಿ ಶಾಲಾ ಕಟ್ಟಡದ ಡೆಮಾಲಿಷನ್ ಗೆ ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಲಾಗಿ, ಮಾನ್ಯ ಸದಸ್ಯರಾದ ಡಾ:ರವಿ ರವರು ಮಾತನಾಡಿ ಸದರಿ ಶಾಲೆಯನ್ನು ಆರ್.ಎಂ.ಎಸ್. ಅಡಿ ಸೇರಿಸಿ ಕಳುಹಿಸುವಂತೆ ತಿಳಿಸಿದರು.

ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಸಧ್ಯಕ್ಕೆ SSA ಕಾರ್ಯಕ್ರಮದಡಿ 1-2 ಕೊಠಡಿಗಳನ್ನು ನಿರ್ಮಿಸಿ ಕಾಂಪೌಂಡ್ ನಿರ್ಮಿಸಿಕೊಡುವಂತೆ DYPCಯವರಿಗೆ ತಿಳಿಸಿದರು.

ಮಹಿಳಾ ಸದಸ್ಯರೊಬ್ಬರು ಮಾತನಾಡಿ, ಶಿರಾ ತಾಲ್ಲೂಕಿನ ದಾಸರಹಳ್ಳಿ ಶಾಲಾ ಕಟ್ಟಡದ ಬಗ್ಗೆ ಮಾಹಿತಿ ಪಡೆದುಕೊಂಡರು.

ಮಾನ್ಯ ಸದಸ್ಯರಾದ ಶ್ರೀಮತಿ ಲಲಿತಾ ನಿಂಗಪ್ಪನವರು ಮಾತನಾಡಿ, ತುಮಕೂರು ತಾಲ್ಲೂಕು ಹೆಬ್ಬೂರಿನ ಸರ್ಕಾರಿ ಉರ್ದು ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಯನ್ನು ನಿರ್ಮಿತಿ ಕೇಂದ್ರಕ್ಕೆ ವಹಿಸಲಾಗಿರುತ್ತದೆ; ಸಿರಿವರ, ಬೊಮ್ಮನಹಳ್ಳಿ ಅಂಗನವಾಡಿ ಕಟ್ಟಡ ಕಾಮಗಾರಿ ಅಪೂರ್ಣವಾಗಿದ್ದು, ಕಳೆದ ನಾಲ್ಕು ವರ್ಷಗಳಿಂದ ಅದೇ ಸ್ಥಿತಿಯಲ್ಲಿರುತ್ತದೆ; ಈ ಕುರಿತು ಪರಿಶೀಲಿಸಿ ಅಗತ್ಯ ಕ್ರಮವಹಿಸಬೇಕೆಂದು ಸಭೆಗೆ ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸಿರಿವರ, ಬೊಮ್ಮನಹಳ್ಳಿ ಅಂಗನವಾಡಿ ಕಟ್ಟಡದ ವಿಷಯವು ನ್ಯಾಯಾಲಯದ ಹಂತದಲ್ಲಿರುತ್ತದೆ ಎಂದು ತಿಳಿಸಿದರು.

ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡಿ, ಹೆಬ್ಬೂರಿನ ಸರ್ಕಾರಿ ಉರ್ದು ಶಾಲಾ ಕಟ್ಟಡ ನಿರ್ಮಾಣ ಕಾಮಗಾರಿಗೆ ನಿರ್ಮಿತಿ ಕೇಂದ್ರಕ್ಕೆ ಈಗಾಗಲೇ ರೂ.45.00 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ, ಈ ತಿಂಗಳ ಅಂತ್ಯದೊಳಗೆ ಅವರು ಕಾಮಗಾರಿ ಪೂರ್ಣಗೊಳಿಸಬೇಕಾಗಿದೆ ಎಂದು ತಿಳಿಸಿದರು.

ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಇವರು ಮಾತನಾಡಿ, ಅಪೂರ್ಣ ಅಂಗನವಾಡಿ ಕಟ್ಟಡಗಳನ್ನು ತಾಲ್ಲೂಕು ಪಂಚಾಯತ್ ಮೂಲಕ ಶಿಶು ಅಭಿವೃದ್ಧಿ ಯೋಜನಾಧಿಕಾರಿಯವರು ನಮಗೆ ವಹಿಸಿರುತ್ತಾರೆ ಎಂದು ಸಭೆಗೆ ತಿಳಿಸಿದರು.

ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಮಾತನಾಡಿ, ಸದರಿ ಕಟ್ಟಡಗಳು ಅಪೂರ್ಣವಾಗಿದ್ದು, ಆರ್ಥಿಕ ವರ್ಷಾಂತ್ಯ ಸಮೀಪಿಸುತ್ತಿರುವುದರಿಂದ ಸದರಿ ಕಾಮಗಾರಿಗಳ ಅನುದಾನ ವ್ಯಪಗತವಾಗಬಾರದೆಂಬ ದೃಷ್ಟಿಯಿಂದ ಸದರಿ ಕಾಮಗಾರಿಯನ್ನು ಜಿಲ್ಲಾ ಪಂಚಾಯತ್ ವತಿಯಿಂದ ನಿರ್ಮಿತಿ ಕೇಂದ್ರಕ್ಕೆ ವಹಿಸಲಾಗಿದೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸದರಿ ಕಾಮಗಾರಿಗಳಿಗೆ ಪೂರ್ಣ ಪ್ರಮಾಣದ ಹಣವನ್ನು ಬಿಡುಗಡೆ ಮಾಡಲಾಗಿದ್ದು, ಈ ಸಂಬಂಧ ಕಾಮಗಾರಿ ಯಾವಾಗ ಮಂಜೂರಾಯಿತು? ಯಾವಾಗ ಕೆಲಸ ಪ್ರಾರಂಭ ಮಾಡಲಾಯಿತು? ಎಂಬ ಬಗ್ಗೆ ಹಿಂದಿನ ಕಡತಗಳನ್ನು ಪರಿಶೀಲಿಸಿ, (ಉದಾಹರಣೆಗೆ :- ತುರುವೇಕೆರೆ ತಾಲ್ಲೂಕು ಹಿರೇಡೆಂಕೆಹಳ್ಳಿ)ನಂತರ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಎರಡು ದಿನಗಳಲ್ಲಿ ವರದಿ ನೀಡುವಂತೆ ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರಿಗೆ ತಿಳಿಸಿದರು, ಹಾಗೂ ವರದಿ ಬಂದ ನಂತರ ಸದರಿ ವರದಿಯನ್ನು ಪರಿಶೀಲಿಸಿ ಮುಂದಿನ ಕ್ರಮವಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಅಧ್ಯಕ್ಷರು, ತಾಲ್ಲೂಕು ಪಂಚಾಯತ್, ಗುಬ್ಬಿ ಇವರು ಮಾತನಾಡಿ, ನಿರ್ಮಿತಿ ಕೇಂದ್ರದವರಿಗೆ ರೂ.4.00ಲಕ್ಷ ಅನುದಾನವನ್ನು ನೀಡಿ ಒಂದು ವರ್ಷವಾದರೂ ಇನ್ನೂ ಕಾಮಗಾರಿ ಪೂರ್ಣಗೊಳಿಸಿರುವುದಿಲ್ಲ. ಈ ಕುರಿತು ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಕೇಳಿದರೆ

ಅವರು ಯಾವುದೇ ಮಾಹಿತಿ ಕೊಡುವುದಿಲ್ಲ. ಮತ್ತು ಅಂದಾಜು ಪಟ್ಟಿಯನ್ನು ಸಹ ಕೊಡುವುದಿಲ್ಲ ಎಂದು ತಿಳಿಸಿದರು.

ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಇವರು ಮಾತನಾಡಿ, ಅವರು ನೀಡಿರುವ ಹಣಕ್ಕಿಂತ ಹೆಚ್ಚು ಮೊತ್ತಕ್ಕೆ ಕೆಲಸ ಮಾಡಿದ್ದೇವೆ. ಇನ್ನೂ ರೂ.10.00ಲಕ್ಷ ಹಣ ನಮಗೆ ಬರಬೇಕಾಗಿರುತ್ತದೆ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ, ಗುಬ್ಬಿರವರು ಮಾತನಾಡಿ, ಕಟ್ಟಡ ಕಾಮಗಾರಿ ಪೂರ್ಣಗೊಂಡಿದೆ. ಕಳೆದ ಮಾರ್ಚ್ ಅಂತ್ಯದಲ್ಲಿ ಹಣ ಬಿಡುಗಡೆ ಮಾಡಲಾಗಿರುತ್ತದೆ. ರೂ.4.50ಲಕ್ಷ ಹಣ ನೀಡಿದಲ್ಲಿ ಶೌಚಾಲಯ, ವಿಶ್ರಾಂತಿ ಗೃಹ ಮಾಡಿಕೊಡುತ್ತೇವೆಂದು ನಿರ್ಮಿತಿ ಕೇಂದ್ರದವರು ತಿಳಿಸಿರುತ್ತಾರೆಂದು ಸಭೆಗೆ ತಿಳಿಸಿದರು.

ಈ ಕುರಿತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸಭೆ ಮುಗಿದ ನಂತರ ಕಾರ್ಯನಿರ್ವಾಹಕ ಅಧಿಕಾರಿ, ಯೋಜನಾ ವ್ಯವಸ್ಥಾಪಕರು, ನಿರ್ಮಿತಿ ಕೇಂದ್ರ ಮತ್ತು ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರುಗಳೊಂದಗೆ ಸಮಾಲೋಚಿಸಿ ಸಮಸ್ಯೆ ಬಗೆಹರಿಸುವುದಾಗಿ ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಟಿ.ಹೆಚ್. ಕೃಷ್ಣಪ್ಪನವರು ಮಾತನಾಡಿ, ಗುಬ್ಬಿ ತಾಲ್ಲೂಕು ಸಿ.ಎಸ್.ಪುರ ಹೋಬಳಿ ಇಡಗೂರಿನ ಸರ್ಕಾರಿ ಉರ್ದು ಶಾಲೆಯಲ್ಲಿ 50 ವಿದ್ಯಾರ್ಥಿಗಳಿದ್ದು, ಸದರಿ ಶಾಲೆಗೆ ಒಬ್ಬ ಶಿಕ್ಷಕರನ್ನು ನೇಮಿಸುವಂತೆ ನಾನು ಮತ್ತು ಶಾಸಕರು ಬಿ.ಇ.ಓ.ರವರಿಗೆ ತಿಳಿಸಿದ್ದಾಗ್ಯೂ ಈವರೆವಿಗೆ ಕ್ರಮ ಕೈಗೊಂಡಿರುವುದಿಲ್ಲ. ಕುನ್ನಾಲ ಅಥವ ಕೊಡೀಗೆಹಳ್ಳಿ ಶಾಲೆಗಳಿಂದ ಶಿಕ್ಷಕರನ್ನು ನಿಯೋಜನೆ ಕೂಡ ಮಾಡಿರುವುದಿಲ್ಲವೆಂದು ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಡಾ:ರವಿ ರವರು ಮಾತನಾಡಿ, ಸಿ.ಆರ್.ಪಿ./ಬಿ.ಆರ್.ಪಿ.ಗಳು ಎರಡು ವರ್ಷಗಳಿಗೊಮ್ಮೆ ಬದಲಾಗುತ್ತಿರುತ್ತಾರೆ, ಇದರಿಂದ ಹೊಸಬರಿಗೆ ಮಾಹಿತಿ ಇರುವುದಿಲ್ಲ. ಆದುದರಿಂದ ಇಂತಹ ಕೊರತೆಗಳ ಬಗ್ಗೆ ಡಾಟಾಬೇಸ್ ಮಾಹಿತಿ ನಿರ್ವಹಿಸಿದರೆ ಅನುಕೂಲ ವಾಗುತ್ತದೆಂದು ತಿಳಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಡಾಟಾಬೇಸ್ ನಿರ್ವಹಿಸಲು ಈಗಾಗಲೇ ತಿಳಿಸಲಾಗಿದೆ. ಅದರಂತೆ ಕ್ರಮಕೈಗೊಂಡು ಶಿಕ್ಷಣ ಇಲಾಖೆಯಲ್ಲಿ ಡಾಟಾಬೇಸ್ ಮಾಹಿತಿ ಇಡಲು ಸೂಚಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಡಾ:ರವಿಯವರು ಮಾತನಾಡಿ, ಎಸ್.ಎಸ್.ಎ. ಅಡಿ ಕೋಟಿಗಟ್ಟಲೆ ಹಣವಿದ್ದು ಅಧಿಕಾರಿಗಳು ಜಿಲ್ಲಾ ಕೇಂದ್ರಕ್ಕೆ ಸರಿಯಾದ ಮಾಹಿತಿ ನೀಡುತ್ತಿಲ್ಲವೆಂದು ಆಕ್ಷೇಪಿಸಿದರು. ಮುಂದುವರಿದು, Bios ಆಗಿ ಕೆಲಸ ಮಾಡದೇ ಅವಶ್ಯಕ ಮಾಹಿತಿ ಒದಗಿಸುವಂತೆ ಸಂಬಂಧಪಟ್ಟ ಅಧಿಕಾರಿಯವರಿಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀಮತಿ ಸುಮಿತ್ರಮ್ಮನವರು ಮಾತನಾಡಿ, ಕುಣಿಗಲ್ ತಾಲ್ಲೂಕಿನ ಹೊಸೂರು, ಮೋದೂರು ಕೊಂಡವಾಡಿ ಗ್ರಾಮಗಳಲ್ಲಿ ಅಂಗನವಾಡಿ ಕಟ್ಟಡಗಳು ಇರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸರ್ವ ಶಿಕ್ಷಣ ಅಭಿಯಾನವು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದ್ದು, ಈ ಕುರಿತು ಈಗಾಗಲೇ ಒಂದು ಕಾರ್ಯಾಗಾರ ಮಾಡಿದ್ದೇನೆ, ಶಾಲಾ ಮುಖ್ಯೋಪಾಧ್ಯಾಯರು ಮತ್ತು ಎಸ್.ಡಿ.ಎಂ.ಸಿ ಅಧ್ಯಕ್ಷರು ಗಳಿಗೆ ಪತ್ರವನ್ನು ಸಹ ಬರೆದಿದ್ದೇನೆ. ಆದ್ದರಿಂದ ಬಿ.ಆರ್.ಪಿ/ಸಿ.ಆರ್.ಪಿ. ಗಳು ಸರ್ಮಪಕವಾಗಿ

ಕೆಲಸ ನಿರ್ವಹಿಸಿ, ಸಂಬಂಧಪಟ್ಟವರಿಗೆ ಜಾವಾಬ್ದಾರಿ ವಹಿಸಿ ದಿನಕ್ಕೆರಡು ಬಾರಿ ದೂರವಾಣಿ ಕರೆ ಮಾಡಿ ಮಾಹಿತಿ ಪಡೆದು 20 ದಿನಗಳ ಒಳಗಾಗಿ ದುರಸ್ಥಿಗಿರುವ ಶಾಲೆಗಳ ಪಟ್ಟಿಯನ್ನು ತಪ್ಪದೆ ಸಲ್ಲಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

**( ಕ್ರಮ: ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತುಮಕೂರು )**

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಕೆಂಚಮಾಯ್ಯನವರು ಮಾತನಾಡಿ, ಮಧುಗಿರಿ ತಾಲ್ಲೂಕಿನಲ್ಲಿರುವ ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆಯಲ್ಲಿ 180 ಮಕ್ಕಳು ಶಿಕ್ಷಣ ಪಡೆಯುತ್ತಿದ್ದು, ಅಲ್ಲಿಯ ನಿಲಯಪಾಲಕರು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ, ಅವರನ್ನು ಬೇರೆ ಕಡೆ ವರ್ಗಾವಣೆ ಮಾಡಿ ಮೂರೇ ದಿವಸದಲ್ಲಿ ಮತ್ತೇ ಅಲ್ಲಿಗೆ ವರ್ಗಾವಣೆ ಮಾಡಿಸಿಕೊಂಡು ಬಂದಿದ್ದಾರೆ, ಆದುದರಿಂದ ಈ ಕುರಿತು ತಾವು ಪರಿಶೀಲನೆ ಮಾಡಿ ತಮ್ಮಿಂದ ಒಂದು ಅರೆಸರ್ಕಾರಿ ಪತ್ರವನ್ನು ಬರೆಯಬೇಕು ಎಂದು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರನ್ನು ಕೋರಿದರು. ಮುಂದುವರೆದು, ಅಕ್ಷರ ದಾಸೋಹ ಕಾರ್ಯಕ್ರಮದಡಿ ಜೂನ್ ಮತ್ತು ಜುಲೈ ತಿಂಗಳಲ್ಲಿ ಶಾಲೆಗಳಿಗೆ ಬೇಳೆ ಸರಬರಾಜು ಆಗಿದ್ದು, ಈ ಸಂಬಂದ ಅಕ್ಟೋಬರ್-ನವೆಂಬರ್ ನಲ್ಲಿ ತಾಲ್ಲೂಕು ಪಂಚಾಯತ್ ಗೆ ರೂ.2,55,40,313.00 ಹಣ ಬಿಡುಗಡೆ ಮಾಡಲಾಗಿದ್ದು, ಮುಖ್ಯ ಶಿಕ್ಷಕರ ಖಾತೆಗೆ ಹಣ ಜಮೆ ಮಾಡಲಾಗಿದೆ. ಆದರೆ ಬಿಸಿಯೂಟದಲ್ಲಿ ಬೇಳೆಯನ್ನು ಬಳಸದೆ ಮಕ್ಕಳಿಗೆ ಬರೀ ಚಿತ್ರಾನ್ನ, ಟೊಮೆಟೋಬಾತ್ ಮಾತ್ರ ಕೊಡುತ್ತಿರುವುದು ಕಂಡುಬಂದಿದೆ ಹಾಗೂ ಸುಳ್ಳು ಓಚರ್ ನೀಡುತ್ತಿದ್ದು, ಹಣ ದುರುಪಯೋಗವಾಗುತ್ತಿದೆ. ಈ ಸಂಬಂಧ ಪರಿಶೀಲನೆಗೆ ಒಂದು ಸದನ ಸಮಿತಿ ರಚನೆ ಮಾಡಬೇಕು, ಅಕ್ಷರ ದಾಸೋಹದ ಮೂಲೋದ್ದೇಶದಂತೆ ಮಕ್ಕಳಿಗೆ ಪೌಷ್ಟಿಕ ಆಹಾರ ನೀಡಿದರೆ ಮಾತ್ರ ಕಾರ್ಯಕ್ರಮ ಸಫಲವಾಗುತ್ತದೆ, ಆದ್ದರಿಂದ ಈ ಕುರಿತು ಒಂದು ಸದನ ಸಮಿತಿ ರಚಿಸಿ ಕಾರ್ಯಕ್ರಮದ ಪರಿಶೀಲನೆ ಮಾಡಬೇಕು ಎಂದು ಸಭೆಗೆ ತಿಳಿಸಿದರು.

ಮುಂದುವರೆದು ಮಾತನಾಡುತ್ತಾ, ನಾಗವಲ್ಲಿ ಗ್ರಾ.ಪಂ. ಪಿ.ಡಿ.ಓ.ರವರ ವಿರುದ್ಧ ಕ್ರಮವಹಿಸಬೇಕು; ಮಧುಗಿರಿ ತಾಲ್ಲೂಕು ರೆಡ್ಡಿಹಳ್ಳಿ ಗ್ರಾ.ಪಂ. ವ್ಯಾಪ್ತಿಯಲ್ಲಿ ರೂ.10.00ಲಕ್ಷ ಅವ್ಯವಹಾರವಾಗಿದ್ದು ಸದರಿ ಗ್ರಾ.ಪಂ. ಪಿ.ಡಿ.ಓ.ರವರ ವಿರುದ್ಧ ಕ್ರಮವಹಿಸಿ ಅವರನ್ನು ಬೇರೆಡೆಗೆ ನಿಯೋಜಿಸಬೇಕು; ನೇರಳೆಕೆರೆ, ನಾಗವಲ್ಲಿ ಮತ್ತು ರೆಡ್ಡಿಹಳ್ಳಿ ಗ್ರಾ.ಪಂ. ಪಿ.ಡಿ.ಓ.ಗಳನ್ನು ಬದಲಾಯಿಸಬೇಕೆಂದು ಸಭೆಯಲ್ಲಿ ತಿಳಿಸಿದರು.

ಜಿ.ಪಂ. ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ಹೆಬ್ಬೂರು ಗ್ರಾ.ಪಂ.ನ ಪಿ.ಡಿ.ಓ.ರವರು ಪಂಚಾಯತಿ ಆಸ್ತಿಯನ್ನು ಯಾರದೋ ಹೆಸರಿಗೆ ಖಾತೆ ಮಾಡಿರುತ್ತಾರೆ. ಸದರಿ ಗ್ರಾ.ಪಂ. ವ್ಯಾಪ್ತಿಯಲ್ಲಿ ಶೌಚಾಲಯ ನಿರ್ಮಾಣ ಮಾಡದೆ ಇರುವವರಿಗೆಲ್ಲಾ ಹಣ ಪಾವತಿ ಮಾಡಿರುತ್ತಾರೆ. ಈ ಬಗ್ಗೆ ಸಂಬಂಧಪಟ್ಟ ದಾಖಲಾತಿಗಳನ್ನು ಒದಗಿಸಿದರೂ ಕೂಡ ಸಂಬಂಧಪಟ್ಟ ಪಿ.ಡಿ.ಓ. ವಿರುದ್ಧ ಈವರೆವಿಗೆ ಶಿಸ್ತು ಕ್ರಮವಹಿಸಿರುವುದಿಲ್ಲವೆಂದು ಆಕ್ಷೇಪಿಸಿದರು. ಮುಂದುವರೆದು, ಸಂಪಿಗೆ ಹೊಸಹಳ್ಳಿ ಗ್ರಾ.ಪಂ.ನಲ್ಲಿ ಒಂದೇ ಕಾಮಗಾರಿಗೆ ಎರಡು-ಮೂರು ಬಾರಿ ಹಣ ಡ್ರಾ ಮಾಡಿ (ಒಟ್ಟು ರೂ.26.00ಲಕ್ಷ) ದುರ್ಬಳಕೆ ಮಾಡಿರುತ್ತಾರೆ ಹಾಗೂ 13ನೇ ಹಣಕಾಸು ಯೋಜನೆಯಡಿ ಸದಸ್ಯರ ಗಮನಕ್ಕೆ ತಾರದೆ, ಯಾವುದೇ ಇಂಡೆಂಟ್/ಓಚರ್ ಇಲ್ಲದೆ ಸುಮಾರು ರೂ.7.00ಲಕ್ಷಗಳ ಸಾಮಗ್ರಿ ಖರೀದಿಸಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಕ್ರಮವಹಿಸುವಂತೆ ಸಭೆಯ ಗಮನಕ್ಕೆ ತಂದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಗ್ರಾ.ಪಂ.ಗಳಲ್ಲಿ ಪಿ.ಡಿ.ಓ.ಗಳು ಬಂದ ಮೇಲೆ ಉತ್ತಮ ಕೆಲಸವಾಗುತ್ತಿದೆ; ಎಲ್ಲೋ ಒಂದೆರಡು ಕಡೆ ಪಿ.ಡಿ.ಓ.ಗಳು ಕೆಲಸ ಮಾಡಿಲ್ಲ; ಬಸವ ವಸತಿ ಯೋಜನೆಯಡಿ 60ಸಾವಿರ ಮನೆಗಳ ನಿರ್ಮಾಣ ಕಾಮಗಾರಿ ಪ್ರಾರಂಭಗೊಂಡಿದೆ, ಎಂ.ಜಿ.ಎನ್.ಆರ್.ಇ.ಜಿ.ಎ. ಕಾರ್ಯಕ್ರಮದಡಿ 23ಸಾವಿರ ಫಲಾನುಭವಿಗಳು ಶೌಚಾಲಯ ನಿರ್ಮಾಣಕ್ಕೆ ಮುಂದೆ ಬಂದಿದ್ದು ಈ ಸಂಬಂಧ ಪಿ.ಡಿ.ಓ.ಗಳೇ ನಿಗಧಿತ ಅರ್ಜಿ ನಮೂನೆ ಭರ್ತಿ ಮಾಡಿ ಫಲಾನುಭವಿಯ ಸಹಿ ಪಡೆದು ಬ್ಯಾಂಕಿಗೆ ಹಣ ತುಂಬಿರುತ್ತಾರೆ. ಎಲ್ಲಾ ಪಿ.ಡಿ.ಓ.ಗಳು ಕೆಲಸ ಮಾಡುತ್ತಿಲ್ಲ ಎಂದು ಹೇಳುವುದು ಸರಿಯಲ್ಲ. ಪಿ.ಡಿ.ಓ.ಗಳು ಇಲ್ಲವಾದಲ್ಲಿ ರೇಷನ್ ಕಾರ್ಡ್ ವಿತರಣೆ ಈ ಮಟ್ಟಕ್ಕೆ ಆಗುತ್ತಿರಲಿಲ್ಲ, ಅವರುಗಳು ಸಾಕಷ್ಟು ಮುತುವರ್ಜಿ ವಹಿಸಿ ಕೆಲಸ ಮಾಡುತ್ತಿದ್ದಾರೆ. ಕೆಲವೆಡೆ ಪಿ.ಡಿ.ಓ.ಗಳ ಮೇಲೆ ಹಲ್ಲೆಯು ನಡೆದಿದ್ದು, ಆದರೂ ಸಹ ಅವರು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದಾರೆ. ಇದು ತಮ್ಮೆಲ್ಲರಿಗೂ ತಿಳಿದ ವಿಷಯವಾಗಿದೆ, ಈ ಕುರಿತು ಶಿಸ್ತು ಪ್ರಾಧಿಕಾರಿಯಾಗಿ ನಾನು ಏನು ಮಾಡಬೇಕೋ ಅದನ್ನು ಮಾಡುತ್ತಿದ್ದೇನೆ, ನಾಗವಲ್ಲಿ ಗ್ರಾ.ಪಂ. ಪಿ.ಡಿ.ಓ. ಪ್ರಕರಣದಲ್ಲಿ ಕ್ರಮವಹಿಸಲಾಗುವುದು, ಇದಕ್ಕೆಲ್ಲಾ ಮೂಲ ಕಾರಣ ಎಂ.ಜಿ.ಎನ್.ಆರ್.ಇ.ಜಿ.ಎ. ಕಾರ್ಯಕ್ರಮ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಡಾ: ರವಿ ರವರು ಮಾತನಾಡಿ, ಕಾರ್ಯನಿರ್ವಾಹಕ ಅಧಿಕಾರಿಯವರು ನೀಡಿರುವ ವರದಿಯ ಪ್ರಕಾರ ನಾಗವಲ್ಲಿ ಪಿ.ಡಿ.ಓ. ವಿರುದ್ಧ ಕ್ರಮ ಜರುಗಿಸಬೇಕೆಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕಾರ್ಯನಿರ್ವಾಹಕ ಅಧಿಕಾರಿ ವರದಿ ನೀಡಿದ ತಕ್ಷಣ ಶಿಸ್ತು ಕ್ರಮವಹಿಸಬೇಕೆಂದೇನೂ ಇಲ್ಲ, ನನಗೆ ದತ್ತವಾಗಿರುವ ಅಧಿಕಾರದನ್ವಯ ಪ್ರಕರಣವನ್ನು ಪರಿಶೀಲಿಸಿರುತ್ತೇನೆ; ಪಿ.ಡಿ.ಓ./ಕಾರ್ಯದರ್ಶಿಗಳ ಬಗ್ಗೆ ಯಾವುದೇ ಮುಲಾಜು ಇರುವುದಿಲ್ಲ; ಪಾವಗಡ ತಾಲ್ಲೂಕಿನಲ್ಲಿ ರೂ.2.50ಲಕ್ಷ ಮೊತ್ತದ ಕಾಮಗಾರಿ ನಿರ್ವಹಿಸದೆ ಎನ್.ಎಂ.ಆರ್. ದಾಖಲು ಮಾಡಿರುವುದನ್ನು ಕಾರ್ಯನಿರ್ವಾಹಕ ಅಧಿಕಾರಿಯವರು ಗುರುತಿಸಿರುತ್ತಾರೆ, ಈ ಸಂಬಂಧ ಜನಪ್ರತಿನಿಧಿಗಳು ಬಂದು, ಅವರದು ಏನೂ ತಪ್ಪಿಲ್ಲವೆಂದು ತಿಳಿಸಿದರೂ ಸಹ ಯಾವುದೇ ಮುಲಾಜು ನೋಡದೆ ಸಂಬಂಧಪಟ್ಟ ಗ್ರಾ.ಪಂ. ಅಧ್ಯಕ್ಷರು ಮತ್ತು ಪಿ.ಡಿ.ಓ. ವಿರುದ್ಧ ಕ್ರಿಮಿನಲ್ ಮೊಕದಮ್ಮೆ ದಾಖಲು ಮಾಡಲಾಗಿರುತ್ತದೆ ಎಂದು ಸಭೆಗೆ ತಿಳಿಸಿದರು.

ಮಹಿಳಾ ಸದಸ್ಯರೊಬ್ಬರು ಮಾತನಾಡಿ, ಮಧುಗಿರಿ ತಾಲ್ಲೂಕಿನ ಬಡವನಹಳ್ಳಿ ಗ್ರಾಮದಲ್ಲಿ ಬಿ.ಸಿ.ಎಂ. ಇಲಾಖಾವತಿಯಿಂದ ನಡೆಯುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಕಟ್ಟಡ ಇರುವುದಿಲ್ಲ, ಈ ಸಂಬಂಧ ದಾನಿಗಳು ನಿವೇಶನ ನೀಡಿದ್ದು ಇಲಾಖಾವತಿಯಿಂದ ಮುಂದಿನ ಕ್ರಮವಹಿಸಬೇಕೆಂದು ಸಭೆಗೆ ತಿಳಿಸಿದರು.

ಜಿಲ್ಲಾ ಅಧಿಕಾರಿ, ಬಿ.ಸಿ.ಎಂ. ರವರು ಮಾತನಾಡಿ, ನಿವೇಶನದ ದಾಖಲೀಕರಣ ಆದ ನಂತರ ಕಟ್ಟಡ ನಿರ್ಮಿಸಲು ಕ್ರಮವಹಿಸಲಾಗುವುದೆಂದು ತಿಳಿಸಿದರು.

**ನಂತರ ದಿನಾಂಕ:29-11-2012ರಂದು ನಡೆದ ಶಿಕ್ಷಣ ಮತ್ತು ಆರೋಗ್ಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**ಡಿ) ದಿನಾಂಕ:04-12-2012ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು.**

ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿಯ ಅಧ್ಯಕ್ಷರು ದಿನಾಂಕ:04-12-2012ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು.

**ಕೂಲಂಕುಷವಾಗಿ ಪರಿಶೀಲಿಸಿದ ನಂತರ ದಿನಾಂಕ:04-12-2012ರಂದು ನಡೆದ ಸಾಮಾಜಿಕ ನ್ಯಾಯ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**ಇ) ದಿನಾಂಕ:21-12-2012ರಂದು ನಡೆದ ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳು:**

ಜಿ.ಪಂ.ನ ಮಾನ್ಯ ಅಧ್ಯಕ್ಷರು ದಿನಾಂಕ:21-12-2012ರಂದು ನಡೆದ ಹಣಕಾಸು, ಲೆಕ್ಕ ಪರಿಶೋಧನಾ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳ ನಡವಳಿಯನ್ನು ಸಭೆಗೆ ಅನುಮೋದನೆಗಾಗಿ ಮಂಡಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, ಅನ್ಯ ಇಲಾಖೆಯವರು ಜಿ.ಪಂ.ನ ಸಭಾಂಗಣದಲ್ಲಿ ಸಭೆ ನಡೆಸುವ ಸಂಬಂಧ ಬಾಡಿಗೆ ನಿಗಧಿಪಡಿಸಿದರೆ ಸಭಾಂಗಣವನ್ನು ಸುಸ್ಥಿತಿಯಲ್ಲಿ ನಿರ್ವಹಿಸಲು ಅನುಕೂಲವಾಗುತ್ತದೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಉಪ ಕಾರ್ಯದರ್ಶಿ (ಆಡಳಿತ)ರವರು ಮಾತನಾಡಿ, ಜಿಲ್ಲಾ ಆರೋಗ್ಯ ಇಲಾಖೆಯ ಬಹಳಷ್ಟು ಸಭೆಗಳು ಹಾಗೂ ಕಂದಾಯ ಇಲಾಖೆಯ ಸಭೆಗಳು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆಯುತ್ತಿದ್ದು, ಕಂದಾಯ ಇಲಾಖೆಯಿಂದ ಬಾಡಿಗೆ ಕೇಳುವುದು ಕ್ಲಿಷ್ಟಕರವಾಗಿದೆ ಎಂದು ತಿಳಿಸಿದರು.

**ಅಂತಿಮವಾಗಿ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇತರೆ ಇಲಾಖೆಗಳು ಸಭೆ ನಡೆಸುವ ಸಂಬಂಧ ಕನಿಷ್ಠ ನಿರ್ವಹಣಾ ವೆಚ್ಚ ರೂ.15,000/-ಗಳ ಬಾಡಿಗೆ ನಿಗಧಿಪಡಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.**

**ನಂತರ ದಿನಾಂಕ:21-12-2012ರಂದು ನಡೆದ ಹಣಕಾಸು, ಲೆಕ್ಕ ಪರಿಶೋಧನೆ ಮತ್ತು ಯೋಜನಾ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಸಭೆಯು ಸರ್ವಾನುಮತದಿಂದ ಅನುಮೋದಿಸಿತು.**

**2. ಅಧ್ಯಕ್ಷರ ಅಪ್ಪಣೆ ಮೇರೆಗೆ ಬರುವ ಇತರೆ ವಿಷಯಗಳು :-**

1. ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಕೆಂಚಮಾರಯ್ಯನವರು ಮಾತನಾಡಿ, ಆಹಾರಧಾನ್ಯಗಳ ಸರಬರಾಜು ಸಂಬಂಧ ಕಳೆದ ಎರಡು ವರ್ಷಗಳಿಂದ TAPCMSನವರಿಗೆ ಬಾಕಿ ರೂ. 2.25ಲಕ್ಷಗಳನ್ನು ಪಾವತಿಸಬೇಕಾಗಿದ್ದು, ಈ ಸಂಬಂಧ ಪ್ರತಿ ತಾಲ್ಲೂಕು ಪಂಚಾಯತ್ ನಿಂದ ರೂ.25,000/-ಗಳನ್ನು ನೀಡುವಂತೆ ಎಲ್ಲ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಆದೇಶ ನೀಡಿ ಒಂದು ವರ್ಷವಾಗಿದ್ದು, ಈವರೆವಿಗೆ ಯಾವುದೇ ಕ್ರಮವಹಿಸಿರುವುದಿಲ್ಲ, ಹಣ ಪಾವತಿಸಲು ಬಿ.ಸಿ.ಎಂ.ಇಲಾಖೆಯಲ್ಲಿ ಯಾವುದೇ ಉಳಿತಾಯ ಲಭ್ಯವಿರುವುದಿಲ್ಲ. ಆದುದರಿಂದ ತಾಲ್ಲೂಕು ಪಂಚಾಯತ್ ವರ್ಗ-1 ಅಥವ ವರ್ಗ-3ರಲ್ಲಿ ಭರಿಸಲು ಅವಕಾಶವಿದ್ದು ಯಾವುದರಿಂದಲಾದರೂ

ಹಣ ಕೊಡಲೇಬೇಕು ಎಂದು ತಿಳಿಸಿದರು. ಮುಖ್ಯ ಲೆಕ್ಕಾಧಿಕಾರಿಯವರು ಮಾತನಾಡಿ, ತಾಲ್ಲೂಕು ಪಂಚಾಯತ್ ನಿಧಿ-3ರಡಿ ಪ್ರತಿ ತಾಲ್ಲೂಕಿನಿಂದ ರೂ.25,000/-ಗಳನ್ನು ಕೊಡಬಹುದಾಗಿರುತ್ತದೆಂದು ಅಭಿಪ್ರಾಯ ನೀಡಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಜಿಲ್ಲಾ ಅಧಿಕಾರಿ, ಬಿ.ಸಿ.ಎಂ. ಇವರು ಈ ವಿಷಯ ಮತ್ತೆ ಚರ್ಚೆಗೆ ಬಾರದಂತೆ ಎರಡು-ಮೂರು ದಿನಕೊಮ್ಮೆ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದೂರವಾಣಿ ಕರೆ ಮಾಡಿ, ಪ್ರತಿ ತಾಲ್ಲೂಕಿನಿಂದ ರೂ.25,000/-ಗಳನ್ನು ಪಡೆಯಲು ಅಗತ್ಯ ಕ್ರಮವಹಿಸಿ ಮುಂದಿನ 15 ದಿನಗಳೊಳಗಾಗಿ ಜಿ.ಪಂ.ಗೆ ಮಾಹಿತಿ ಒದಗಿಸುವಂತೆ ತಿಳಿಸಿದರು.

**(ಕ್ರಮ: ಜಿಲ್ಲಾ ಅಧಿಕಾರಿ, ಬಿ.ಸಿ.ಎಂ. ಇಲಾಖೆ, ತುಮಕೂರು )**

2. ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಆರ್.ಸಿ.ಆಂಜಿನಪ್ಪನವರು ಮಾತನಾಡಿ, ಪಾವಗಡ ತಾಲ್ಲೂಕಿನ ವೆಂಕಟಮ್ಮನಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿಗಾಗಿ ಸರ್ಕಾರದ ವತಿಯಿಂದ ಡೀ-ಪ್ಲೋರೈಡ್ ಘಟಕ ಸ್ಥಾಪಿಸಿದ್ದು, 20ಲೀಟರ್ ನ ಒಂದು ಕ್ಯಾನ್ ಗೆ ರೂ.4.00ಗಳ ಶುಲ್ಕ ನಿಗಧಿ ಪಡಿಸಿರುತ್ತಾರೆ; ಆದರೆ ಶಿರಾ ತಾಲ್ಲೂಕು ಪಟ್ಟನಾಯಕನಹಳ್ಳಿಯಲ್ಲಿ ಅದೇ 20ಲೀಟರ್ ನೀರಿನ ಕ್ಯಾನನ್ನು ಧರ್ಮಸ್ಥಳ ಸಂಸ್ಥೆಯವರು ಕೇವಲ ರೂ.2.00ಗಳಿಗೆ ಕೊಡುವುದಾಗಿ ಹೇಳುತ್ತಿದ್ದಾರೆ. ಇದು ಸರ್ಕಾರದ ಸಹಭಾಗಿತ್ವದಲ್ಲಿ ನಡೆಯುತ್ತಿರುವುದರಿಂದ ಹಾಗೂ ವೆಂಕಟಮ್ಮನಹಳ್ಳ ಗ್ರಾಮದಲ್ಲಿ ಅತ್ಯಂತ ಬಡತನವಿರುವುದರಿಂದ ಈ ಸಂಬಂಧ, ಸಂಬಂಧಪಟ್ಟ ಸಂಸ್ಥೆಯವರೊಂದಿಗೆ ಸಮಾಲೋಚಿಸಿ ನೀರಿನ ದರ ಕಡಿಮೆಗೊಳಿಸಬೇಕೆಂದು ಕೋರಿದರು.

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ಮಧುಗಿರಿ ಇವರು ಮಾತನಾಡಿ, ಪ್ರಸ್ತುತ 13ನೇ ಹಣಕಾಸು ಯೋಜನೆಯಡಿ ಪುನ: 30ಘಟಕಗಳು ಮಂಜೂರಾಗಿರುತ್ತವೆ ಎಂದು ತಿಳಿಸಿ, ಯಾವುದೇ ಒಂದು ಭಾಗದಲ್ಲಿ ನೀರಿನ ದರ ಕಡಿಮೆ ಮಾಡಿದರೆ ಉಳಿದವರೆಲ್ಲರೂ ಸಹ ಅದನ್ನೇ ಕೇಳುತ್ತಾರೆ ಎಂದು ಸಭೆಗೆ ತಿಳಿಸಿದರು.

**ಸುದೀರ್ಘ ಚರ್ಚೆಯ ನಂತರ ಈ ಕುರಿತು ಪರಿಶೀಲಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಸರ್ವಾನುಮತದಿಂದ ತೀರ್ಮಾನಿಸಿತು.**

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀಮತಿ ಸುಮಿತ್ರಮ್ಮನವರು ಮಾತನಾಡಿ, ತುಮಕೂರು ತಾಲ್ಲೂಕು ಕಸಬಾ ಹೋಬಳಿ ಗಿರಿಗೌಡನಪಾಳ್ಯ ಮತ್ತು ಕಿತ್ತಾವಂಗಲ ಗ್ರಾಮಗಳ ಸರ್ಕಾರಿ ಶಾಲೆಗಳಿಗೆ ಶಾಲಾ ಆವರಣ ನಿರ್ಮಿಸಲು ಅಗತ್ಯ ಕ್ರಮವಹಿಸಬೇಕೆಂದು ಸಭೆಯ ಗಮನಕ್ಕೆ ತಂದರು. ಡಿ.ಡಿ.ಪಿ.ಐ.ತುಮಕೂರು ಇವರು ಮಾತನಾಡಿ, ಶಾಲಾ ಆವರಣ ನಿರ್ಮಾಣಕ್ಕಾಗಿ ಪ್ರತಿ ತಾಲ್ಲೂಕಿಗೆ ರೂ.2.50 ಲಕ್ಷ ಅನುದಾನ ನೀಡಲಾಗುತ್ತಿದ್ದು, ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿ ಹಂತ-ಹಂತವಾಗಿ ಕಾಮಗಾರಿ ನಿರ್ವಹಿಸಲಾಗುತ್ತಿದೆ, ಆದ್ಯತೆ ಮೇಲೆ ಮೊದಲು ನಗರಪ್ರದೇಶದಲ್ಲಿ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ.ಸದಸ್ಯರಾದ ಶ್ರೀ ಪಂಚಾಕ್ಷರಿಯವರು ಮಾತನಾಡಿ, ಅತಿಯಾದ ವಿದ್ಯುತ್ ವ್ಯತ್ಯಯದಿಂದಾಗಿ ಚಿ.ನಾ.ಹಳ್ಳಿ ತಾಲ್ಲೂಕಿನಲ್ಲಿ ಕುಡಿಯುವ ನೀರಿಗೆ ಬಹಳ ಸಮಸ್ಯೆಯಾಗಿದೆ; ಒಂದು ವೇಳೆ ಕೊಳವೆಬಾವಿಯಲ್ಲಿ ನೀರು ಇದ್ದರೂ ಸಹ ವಿದ್ಯುತ್ ಸಮಸ್ಯೆಯಿಂದ ಅದನ್ನು ಹೊರತೆಗೆಯಲು ಸಾಧ್ಯವಿಲ್ಲದಾಗಿದೆ; ಆದ್ದರಿಂದ ಬೆಸ್ಕಾಂನವರು ಈ ಬಗ್ಗೆ ಮಾಹಿತಿ ನೀಡಬೇಕೆಂದು ಕೋರಿದರು. ಉತ್ತರವಾಗಿ, ಕಾರ್ಯಪಾಲಕ ಇಂಜಿನಿಯರ್, ಬೆಸ್ಕಾಂ ಇವರು

ಮಾತನಾಡಿ, ದಿನಕ್ಕೆ 6ಗಂಟೆಗಳ ಕಾಲ (ಬೆಳಿಗ್ಗೆ 3ಗಂಟೆ ಮತ್ತು ರಾತ್ರಿ 3.00ಗಂಟೆ) 3ಫೇಸ್ ವಿದ್ಯುತ್ ಸರಬರಾಜು ಮಾಡಬೇಕೆಂಬ ನಿಯಮವಿದೆ, ಅದರ ಪ್ರಕಾರ ಕೆ.ಬಿ.ಕ್ರಾಸ್ ಸಬ್ ಸ್ಟೇಷನ್ ವ್ಯಾಪ್ತಿಗೆ (ಚಿ.ನಾ.ಹಳ್ಳಿ, ತಿಪಟೂರು ಮತ್ತು ತುರುವೇಕೆರೆ) 150 ಮೆ.ವಾ. ವಿದ್ಯುತ್ ಅಗತ್ಯತೆ ಇದ್ದು ಪ್ರಸ್ತುತ 250 ಕೆ.ವಿ. ವಿದ್ಯುತ್ ಪೂರೈಕೆಯಾಗುತ್ತಿರುತ್ತದೆ. ಇದರಿಂದ ಜನರೇಟರ್ ಟ್ರಿಪ್ ಆದರೆ ವಿದ್ಯುತ್ ಪೂರೈಸಲು ಸಾಧ್ಯವಾಗುತ್ತಿಲ್ಲ; ಈ ಕುರಿತು ಕೇಂದ್ರ ಕಛೇರಿಗೆ ಈಗಾಗಲೇ ಬೇಡಿಕೆ ಸಲ್ಲಿಸಲಾಗಿದ್ದು ಮುಂದಿನ ದಿನಗಳಲ್ಲಿ ಈ ಸಮಸ್ಯೆ ಸರಿಹೋಗಬಹುದೆಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ನೀರಿಲ್ಲ ಎಂದರೆ ಜನ ಕೊಳವೆ ಬಾವಿಗಳನ್ನು ಕೊರೆಸಿಕೊಡುವಂತೆ ಕೇಳುತ್ತಾರೆ, ಆದರೆ ನೀರು ಲಭ್ಯವಿರುವ ಕೊಳವೆಬಾವಿಯಲ್ಲಿ ನೀರು ಹೊರತೆಗೆಯಲು ವಿದ್ಯುತ್ ಕಡಿತದಿಂದ ಸಮಸ್ಯೆಯಾಗಿರುತ್ತದೆ. ಆದ್ದರಿಂದ ಸಮರ್ಪಕ/ ಸಮಗ್ರ ಮಾಹಿತಿ ಒದಗಿಸಿದಲ್ಲಿ, 3 ಫೇಸ್ ವಿದ್ಯುತ್ ಪೂರೈಸಲು ಸಂಬಂಧಪಟ್ಟ ಮೇಲಾಧಿಕಾರಿಗಳೊಂದಿಗೆ ಸಮಾಲೋಚಿಸಲಾಗುವುದು ಎಂದು ಸಭೆಗೆ ತಿಳಿಸಿದರು.

ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಬೇವಿನಹಳ್ಳಿ-ಚಿಕ್ಕಬಾಣಗೆರೆಗಳಲ್ಲಿ ವಿದ್ಯುತ್ ಪೂರೈಕೆಯಾಗುತ್ತಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಪ್ರತಿಯಾಗಿ ದಿನದಲ್ಲಿ 9ಗಂಟೆಗಳ ಕಾಲ ಸಿಂಗಲ್ ಫೇಸ್ ಮತ್ತು 3ಗಂಟೆಗಳ ಕಾಲ 3ಫೇಸ್ ವಿದ್ಯುತ್ ಒದಗಿಸಲಾಗುತ್ತಿದೆ ಎಂದು ತಿಳಿಸಿದರು. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಈ ಕುರಿತು ಪರಿಶೀಲಿಸಿ ಅಗತ್ಯ ಕ್ರಮವಹಿಸುವಂತೆ ಬೆಸ್ಕಾಂ ಅಧಿಕಾರಿಯವರಿಗೆ ತಿಳಿಸಿದರು.

**(ಕ್ರಮ: ಅಧೀಕ್ಷಕ ಇಂಜಿನಿಯರ್, ಬೆಸ್ಕಾಂ, ತುಮಕೂರು )**

3.ಮಾನ್ಯ ಸದಸ್ಯರಾದ ಶ್ರೀ ಸಿ.ಆರ್.ಉಮೇಶ್ ರವರು ಮಾತನಾಡಿ, 2008-09 ಮತ್ತು 2009-10ನೇ ಸಾಲಿನಲ್ಲಿ ಗಂಗಕಲ್ಯಾಣ ಯೋಜನೆಯಡಿ ಕೊಳವೆಬಾವಿ ಕೊರೆದಿದ್ದು ಅವುಗಳಿಗೆ ಈವರೆಗೆ ವಿದ್ಯುತ್ತೀಕರಣಗೊಳಿಸಿರುವುದಿಲ್ಲ; ತಾವರೆಕೆರೆಯಲ್ಲಿರುವ ಪ್ರೌಢಶಾಲಾ ಆವರಣದ ಕೊಳವೆಬಾವಿಗೆ ಸಿಂಗಲ್ ಫೇಸ್ ಮೋಟಾರ್ ಗೆ ಪ್ರತ್ಯೇಕ ಮೀಟರ್ ಇರುತ್ತದೆ. ಆದರೆ ವಿಜಿಲೆನ್ಸ್ ನವರು ಅದನ್ನು ಅನಧಿಕೃತವೆಂದು ಪರಿಗಣಿಸಿ, ಅದಕ್ಕೆ ರೂ.1.50ಲಕ್ಷ ದಂಡ ವಿಧಿಸಿರುತ್ತಾರೆ ಎಂದು ತಿಳಿಸಿದರು. ಮಾನ್ಯ ಸದಸ್ಯರಾದ ಶ್ರೀ ಬಡೀರಣ್ಣನವರು ಮಾತನಾಡಿ, ಅದು ಅನಧಿಕೃತವಲ್ಲ, ಬಿಸಿಯೂಟ ಕಾರ್ಯಕ್ರಮಕ್ಕೆಂದೆ ಅದನ್ನು ಬಿಡಲಾಗಿದೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಕೆಲಸ ಮಾಡಿಯೂ ಪ್ರಕರಣ ದಾಖಲಿಸಿದರೆ ಏನು ಪ್ರಯೋಜನ, ಅದ್ದರಿಂದ ಈ ಕುರಿತು ಬೆಸ್ಕಾಂನ ಅಧೀಕ್ಷಕ ಇಂಜಿನಿಯರ್/ ಕಾರ್ಯಪಾಲಕ ಇಂಜಿನಿಯರ್/ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರಿಗಳೂ ಜೊತೆಗೂಡಿ ಒಂದು ಸಭೆ ನಡೆಸಬೇಕೆಂದು ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಯವರಿಗೆ ತಿಳಿಸಿದರು.

4. ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಕೆಂಚಮಾರಯ್ಯ ನವರು ಮಾತನಾಡಿ, ವಿಶೇಷ ಘಟಕ ಯೋಜನೆ ಅಡಿ ಜಗಜೀವನರಾಂ ಭವನ ನಿರ್ಮಾಣಕ್ಕಾಗಿ ರೂ.2.00ಕೋಟಿ ಅನುದಾನ ಮಂಜೂರಾಗಿ 2 ವರ್ಷಗಳಾಗಿವೆ; ಈ ಪೈಕಿ 6 ತಿಂಗಳಿನಿಂದೀಚೆಗೆ ಮಧುಗಿರಿ ತಾಲ್ಲೂಕಿನಲ್ಲಿ 4 ಭವನಕ್ಕೆ ರೂ.40.00ಲಕ್ಷಗಳು ಮಂಜೂರಾಗಿರುತ್ತದೆ; ತುಮಕೂರು ಜಿಲ್ಲಾ ಮಟ್ಟದಲ್ಲಿ ಜಗಜೀವನರಾಂ ಭವನ ನಿರ್ಮಿಸಲು ರೂ.25.00ಲಕ್ಷಗಳು ಮಂಜೂರಾಗಿರುತ್ತದೆ; ಆದರೆ ಏನು

ಕೆಲಸವಾಗಿರುವುದಿಲ್ಲ; ಇದಕ್ಕೆ ಕಾರಣವೇನು ಎಂದು ಪ್ರಶ್ನಿಸಿದರು? ಪ್ರತಿಯಾಗಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳು ಮಾತನಾಡಿ, ನಗರದಲ್ಲಿ ಸದರಿ ಭವನ ನಿರ್ಮಾಣಕ್ಕಾಗಿ ಸ್ಥಳ ಗುರುತಿಸಿ ಅನುಮೋದನೆಗಾಗಿ ಪ್ರಸ್ತಾವನೆಯನ್ನು ಕಂದಾಯ ಇಲಾಖೆಯ ಆಯುಕ್ತರಿಗೆ ಕಳುಹಿಸ ಲಾಗಿರುತ್ತದೆ; ಪ್ರಸ್ತಾವನೆ ಅನುಮೋದನೆಯಾಗಿ ಬಂದ ಕೂಡಲೇ ಕಾಮಗಾರಿ ಪ್ರಾರಂಭಿಸ ಲಾಗುವುದು, ಈ ಸಂಬಂಧ ಯಾವುದೇ ಅನುದಾನ ವ್ಯಪಗತವಾಗುವುದಿಲ್ಲ ಎಂದು ಸಭೆಗೆ ಸ್ಪಷ್ಟಪಡಿಸಿದರು. ಹಾಗೂ ತಾಲ್ಲೂಕುವಾರು ಎಲ್ಲೆಲ್ಲಿ ಭವನ ಮಂಜೂರಾಗಿದೆ ಎಂಬ ಬಗ್ಗೆ ಸಭೆಗೆ ಮಾಹಿತಿ ನೀಡಿದರು.

5. ಮಾನ್ಯ ಸದಸ್ಯರಾದ ಶ್ರೀ ವೈ.ಹೆಚ್.ಹುಚ್ಚಯ್ಯನವರು ಮಾತನಾಡಿ, ನಿರ್ಮಿತಿ ಕೇಂದ್ರ ಮತ್ತು ಕರ್ನಾಟಕ ಭೂ ಸೇನಾ ನಿಗಮಕ್ಕೆ ವಹಿಸಲಾಗಿರುವ ಎಲ್ಲಾ ಕಟ್ಟಡ ಕಾಮಗಾರಿಗಳು ಬಾಕಿ ಉಳಿದಿರುವುದಾಗಿ ಅಸಮಧಾನ ವ್ಯಕ್ತಪಡಿಸಿದರು.

6. ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಕೆಂಚಮಾರಯ್ಯನವರು ಮಾತನಾಡಿ, ವಿಶೇಷ ಘಟಕ ಯೋಜನೆಯನ್ನು ಸಂಪೂರ್ಣವಾಗಿ ಜಿ.ಪಂ. ವ್ಯಾಪ್ತಿಗೆ ನೀಡಿದರೆ ಕೆಲಸಗಳು ಬೇಗ ಆಗುತ್ತವೆ. ಆದ್ದರಿಂದ ಈ ಬಗ್ಗೆ ಜಿ.ಪಂ. ಅಧ್ಯಕ್ಷರ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕು ಎಂದು ತಿಳಿಸಿದರು.

7. ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಜಗದೀಶ್ ರವರು ಮಾತನಾಡಿ, ತುರುವೇಕೆರೆ ತಾಲ್ಲೂಕು ಅರೆಮಲ್ಲೇನಹಳ್ಳಿಯಲ್ಲಿನ ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ಯಾವ ಹಂತದಲ್ಲಿದೆ ಎಂದು ಪ್ರಶ್ನಿಸಲಾಗಿ, ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಯವರು ಮಾತನಾಡಿ ಆ ಕುರಿತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುವುದಾಗಿ ತಿಳಿಸಿದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸರ್ಕಾರದ ಮಟ್ಟದಲ್ಲಿ ಅನುಮೋದನೆಗೆ ಬಾಕಿ ಇರುವ ಪ್ರಸ್ತಾವನೆಗಳ ಪಟ್ಟಿ ನೀಡಿದಲ್ಲಿ ತಾವು Remind ಮಾಡುವುದಾಗಿ ತಿಳಿಸಿದರು.

8. ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಉಗ್ರಯ್ಯನವರು ಮಾತನಾಡಿ, ತಿಪಟೂರು ತಾಲ್ಲೂಕು ನೊಣವಿನಕೆರೆ-ಗುಂಗರಮಳೆಯ ಒಂದು ತೋಟದ ಮಧ್ಯ ಭಾಗದಲ್ಲಿ ಪವರ್ ಲೈನ್ ಹಾದುಹೋಗಿದ್ದು, ಇದರಿಂದ ಆ ಭಾಗದಲ್ಲಿ 900 ತೆಂಗಿನ ಮರಗಳು ಹೋಗಿರುತ್ತವೆ; ಈ ಕುರಿತು ಯಾವ ಸ.ನಂ.ನಲ್ಲಿ ಹಾದುಹೋಗಿದೆ ಎಂಬ ಬಗ್ಗೆ ಮಾಹಿತಿ ಒದಗಿಸಬೇಕು; ತೋಟಗಾರಿಕಾ ಇಲಾಖಾವತಿಯಿಂದ ಪ್ರತಿ ಮರಕ್ಕೆ ರೂ.8,300/- ಪರಿಹಾರಧನ ನಿಗಧಿಪಡಿಸಿರುತ್ತಾರೆ, ಆದರೆ ಮಾರುಕಟ್ಟೆಯಲ್ಲಿ ಪ್ರತಿ ಮರದ ಬೆಲೆ ರೂ.25,000/- ಇದೆ; ರೈತರ ಗಮನಕ್ಕೆ ತರದೆ ಜಮೀನು ಸರ್ವೆ ಮಾಡಿರುತ್ತಾರೆ. ತೆಂಗಿನ ಮರಗಳು ಹೋದರೆ ರೈತ ಹಾಳಾಗುತ್ತಾನೆ. ಮಂಗಳೂರಿನ ಗ್ಯಾಸ್ ಲೈನ್ ಪ್ರಕರಣದಲ್ಲಿ ಪ್ರತಿ ಮರಕ್ಕೆ ರೂ.15,000/- ಪರಿಹಾರ ನನೀಡಿರುತ್ತಾರೆ. ಆದ್ದರಿಂದ ಈ ಸಭೆಯಲ್ಲಿ ರೈತನ ಪರವಾಗಿ ಮಾರುಕಟ್ಟೆ ಬೆಲೆಯಂತೆ ಪರಿಹಾರ ನೀಡಲು ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕು; ಹಾಗೂ ಪ್ರಸ್ತಾವನೆ ಅನುಮೋದನೆಯಾಗಿ ಬರುವವರೆಗೂ ಕೆಲಸ ಸ್ಥಗಿತಗೊಳಿಸಬೇಕು; ಸಂಜೆ ವೇಳೆ ರೈತರಿಲ್ಲದ ಸಮಯದಲ್ಲಿ ಜಮೀನುಗಳನ್ನು ಸರ್ವೇ ಮಾಡುತ್ತಿದ್ದಾರೆ. ಇದನ್ನು ತಪ್ಪಿಸಬೇಕು ಎಂದು ಸಭೆಯಲ್ಲಿ ತಿಳಿಸಿದರು.

ಕಾರ್ಯಪಾಲಕ ಇಂಜಿನಿಯರ್, ಬೆಸ್ಕಾಂ ಇವರು ಮಾತನಾಡಿ, ನವಂಬರ್ 2012ರಲ್ಲಿ ಒಂದು ಹೊಸ ಸಬ್ ಸ್ಟೇಷನ್ ಮಂಜೂರಾಗಿರುತ್ತದೆ; ಇದಕ್ಕೆ ದೊಡ್ಡ ಟವರ್ ಹಾಕಬೇಕಾಗಿರುತ್ತದೆ. ಈ ಸಂಬಂಧ ರೈತರಿಗೆ ತಿಳಿಸಿ ಖಚಿತಪಡಿಸಿಕೊಂಡು ತೋಟಗಾರಿಕೆ

ಇಲಾಖೆಯಿಂದ ಪರಿಹಾರ ನಿಗಧಿಪಡಿಸಿ ಅದರಂತೆ ಪರಿಹಾರಧನ ಕೊಡುತ್ತೇವೆ. 2007ರಲ್ಲಿ ಪರಿಹಾರದ ಮೊತ್ತವನ್ನು ಪರಿಷ್ಕರಿಸಲಾಗಿರುತ್ತದೆ, ಅದರಂತೆ ಮೂರೂ ತಳಿಗಳಿಗೆ ಬೇರೆ ಬೇರೆ ದರ ನಿಗಧಿಯಾಗಿರುತ್ತದೆ, ಅದರ ಪ್ರಕಾರ ಪರಿಹಾರ ಕೊಡುತ್ತೇವೆ ಎಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಸರ್ವೇ ಮಾಡಿಸಿ, ನಿಯಮಾವಳಿಗಳ ಬಗ್ಗೆ ತೋಟಗಾರಿಕೆ ಇಲಾಖೆಯ ಉಪನಿರ್ದೇಶಕರಿಂದ ಮಾಹಿತಿ ಪಡೆದರು, ಮುಂದುವರೆದು, ಈ ಬಗ್ಗೆ ಬೆಸ್ಕಾಂನವರು ಸಂಧಾನ ಮಾಡಬೇಕು; ಅಪ್ಪರ್ ಲಿಮಿಟ್ ಗೆ ಪರಿಹಾರ ಹೆಚ್ಚಿಸಲು ತೋಟಗಾರಿಕಾ ಇಲಾಖೆ ವತಿಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಬೇಕು ಹಾಗೂ 2007ರಿಂದ ದರ ಪರಿಷ್ಕರಣೆಯಾಗಿರುವುದಿಲ್ಲವೆಂದು ಸರ್ಕಾರದ ಪ್ರಧಾನ ಕಾರ್ಯದರ್ಶಿಯವರಿಗೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ತಿಳಿಸಿದರು.

**(ಕ್ರಮ : ಕಾರ್ಯಪಾಲಕ ಇಂಜಿನಿಯರ್, ಬೆಸ್ಕಾಂ, ತಿಪಟೂರು/**
**ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ತುಮಕೂರು)**

9. ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಉಗ್ರಯ್ಯ ನವರು ಮಾತನಾಡಿ, ಈ ಹಿಂದೆ ಸಹಾಯಧನ ಕೋರಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ (ಹಿಂದಿನ ಸಹಾಯಕ ನಿರ್ದೇಶಕರ ಅವಧಿಯಲ್ಲಿ)ಅರ್ಜಿ ಸಲ್ಲಿಸಲಾಗಿದ್ದು, ಈವರೆವಿಗೂ ಸಹಾಯಧನ ನೀಡಿರುವುದಿಲ್ಲ. ಈ ಕುರಿತು ಹಾಲಿ ಸಹಾಯಕ ನಿರ್ದೇಶಕರನ್ನು ಕೇಳಿದರೆ ಮತ್ತೊಮ್ಮೆ ಅರ್ಜಿ ಕೊಡಿ ಪರಿಶೀಲಿಸುತ್ತೇನೆ ಎನ್ನುತ್ತಾರೆ. ಅಧಿಕಾರಿಗಳು ಸದಸ್ಯರುಗಳಿಗೆ ಈ ರೀತಿ ಅಗೌರವ ಸೂಚಿಸಬಾರದು. ಆದ್ದರಿಂದ ಅವರಿಗೆ ಸೂಕ್ತ ಸೂಚನೆ ನೀಡಬೇಕು ಎಂದು ತಿಳಿಸಿದರು. ಪ್ರತಿಯಾಗಿ ಸಭೆಯ ಮಾನ್ಯ ಅಧ್ಯಕ್ಷರು ಮಾತನಾಡಿ, ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ತುಮಕೂರು ಇವರಿಗೆ ನೋಟೀಸ್ ಜಾರಿ ಮಾಡುವಂತೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ತಿಳಿಸಿದರು.

10. ಅಧ್ಯಕ್ಷರು, ತಾ.ಪಂ. ಗುಬ್ಬಿ ರವರು ಮಾತನಾಡಿ, ತಾ.ಪಂ. ಕ್ರಿಯಾ ಯೋಜನೆಗೆ ಜಿಲ್ಲಾ ಪಂಚಾಯತಿಯಿಂದ ತ್ವರಿತವಾಗಿ ಅನುಮೋದನೆ ನೀಡಬೇಕು; ಪ್ರಸ್ತುತ ಬರಗಾಲ ವಿರುವುದರಿಂದ ಶಾಲೆ/ಅಂಗನವಾಡಿ ಕಟ್ಟಡಗಳ ದುರಸ್ಥಿಗೆ 13ನೇ ಹಣಕಾಸು ಯೋಜನೆಯಡಿ ಮಂಜೂರಾತಿ ನೀಡಬೇಕು ಎಂದು ತಿಳಿಸಿದರು. ಪ್ರತಿಯಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಅಪೂರ್ಣ ಕಟ್ಟಡಗಳಿಗೆ ರೂ.6.00ಲಕ್ಷ ಬಿಡುಗಡೆ ಮಾಡಲಾಗಿದ್ದು, ಮಾರ್ಗಸೂಚಿ ಪ್ರಕಾರ ಕ್ರಿಯಾ ಯೋಜನೆಗೆ ಈಗಾಗಲೇ ಅನುಮೋದನೆ ನೀಡಲಾಗಿದೆ, ಅನುದಾನ ವ್ಯಪಗತವಾದರೂ ಮಾರ್ಗಸೂಚಿ ಉಲ್ಲಂಘನೆಗೆ ಅವಕಾಶವಿರುವುದಿಲ್ಲ, ಈ ಸಂಬಂಧ ಮಾರ್ಗಸೂಚಿಯನ್ನು ಉಲ್ಲಂಘಿಸಿದರೆ ಸಂಬಂಧಪಟ್ಟ ಕಾರ್ಯನಿರ್ವಾಹಕ ಅಧಿಕಾರಿಯವರೇ ನೇರ ಜವಾಬ್ದಾರರಾಗುತ್ತಾರೆ (ಉದಾ: ಕ್ರಿಯಾ ಯೋಜನೆಯಲ್ಲಿ ತುರುವೇಕೆರೆ ರಸ್ತೆ ಅಭಿವೃದ್ಧಿ ಎಂದಿರುತ್ತದೆ, ಈ ಕುರಿತು ಎಲ್ಲಿಂದ ಎಲ್ಲಿಯವರೆಗೆ ಎಂದು ಸ್ಪಷ್ಟವಾಗಿ ನಮೂದಿಸಿರಬೇಕು, ಇಲ್ಲವಾದಲ್ಲಿ ಕಾಮಗಾರಿ ವಿಳಂಭವಾಗುತ್ತದೆ) ಎಂದು ಸಭೆಗೆ ತಿಳಿಸಿದರು.

11. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಜಿಲ್ಲೆಯಲ್ಲಿ ಕುಡಿಯುವ ನೀರಿಗೆ ಸಪ್ಲಿಮೆಂಟರಿ ರೂ.26.00ಕೋಟಿ ಮೊತ್ತಕ್ಕೆ ಕ್ರಿಯಾ ಯೋಜನೆ ಅನುಮೋದನೆಯಾಗಿದ್ದು ಎರಡು ದಿನಗಳೊಳಗೆ ಎಲ್ಲಾ ಮಾನ್ಯ ಸದಸ್ಯರುಗಳಿಗೆ ಸುತ್ತೋಲೆ ಕಳುಹಿಸಲಾಗುವುದು. ಈ ಜಿಲ್ಲೆಯಲ್ಲಿ ಕಳೆದ ವರ್ಷ ರೂ.34.00ಲಕ್ಷ ಖರ್ಚು ಮಾಡಲಾಗಿತ್ತು, ಇಂದು ಶೇ.74ರಷ್ಟು ಪ್ರಗತಿ ಸಾಧಿಸಿ ರಾಜ್ಯದಲ್ಲಿ 4ನೇ ಸ್ಥಾನದಲ್ಲಿರುತ್ತದೆ. ಪೂರ್ಣ ಪ್ರಮಾಣದ

ಅನುದಾನವನ್ನು ಖರ್ಚು ಮಾಡಿದಲ್ಲಿ ಇನ್ನೂ ಅನುದಾನ ನೀಡುವುದಾಗಿ ಸರ್ಕಾರದ ಮಟ್ಟದಲ್ಲಿ ತಿಳಿಸಿರುತ್ತಾರೆಂದು ಸಭೆಗೆ ತಿಳಿಸಿದರು.

12. ಮಾನ್ಯ ಜಿ.ಪಂ, ಸದಸ್ಯರಾದ ಶ್ರೀ ಆಂಜಿನಪ್ಪನವರು ಮಾತನಾಡಿ, ಪಾವಗಡ, ಶಿರಾ ಮತ್ತು ಮಧುಗಿರಿ ತಾಲ್ಲೂಕುಗಳಲ್ಲಿ ಅಸಮರ್ಪಕ ವಿದ್ಯುತ್ ಪೂರೈಕೆಯಿಂದಾಗಿ ಕುಡಿಯುವ ನೀರಿಗೆ ತೀವ್ರ ಸಮಸ್ಯೆ ಉಂಟಾಗಿರುತ್ತದೆ. ಈ ಸಂಬಂಧ ಜನರೇಟರ್ ಗಳಿಗೆ ಸರ್ಕಾರ ಸಹಾಯಧನ ನೀಡುತ್ತಿದ್ದು ಇದನ್ನು ರೈತರಿಗೆ ನೀಡುವ ವ್ಯವಸ್ಥೆಯಾಗಬೇಕು; ಕೃಷಿ ಇಲಾಖೆಯವರು ಬೇಸಿಗೆಯಲ್ಲಿ ರೈತರಿಗೆ ಬಿತ್ತನೆ ಭೀಜ ಕೊಡಬೇಕು; ಸುವರ್ಣ ಭೂಮಿ ಯೋಜನೆಯಡಿ ಮಂಜೂರಾದ ಹಣವನ್ನು ಸಂಬಂಧಪಟ್ಟ ಫಲಾನುಭವಿಗಳ ಖಾತೆಗೆ ವರ್ಗಾಯಿಸಲು ಕ್ರಮವಹಿಸಬೇಕು ಎಂದು ತಿಳಿಸಿದರು.

13. 2012-13ನೇ ಸಾಲಿನ 13ನೇ ಹಣಕಾಸು ಯೋಜನೆ – ನಾಗರೀಕ ಸೌಲಭ್ಯ ಯೋಜನೆ ಅಡಿ ಲಭ್ಯವಿರುವ ಹೆಚ್ಚುವರಿ ಉಳಿಕೆ ಅನುದಾನಕ್ಕೆ ತಯಾರಿಸಲಾಗಿರುವ 3ನೇ ಕಂತಿನ ಕ್ರಿಯಾ ಯೋಜನೆಯನ್ನು ಅನುಮೋದಿಸುವ ಬಗ್ಗೆ:-

ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ. ವಿಭಾಗ, ಮಧುಗಿರಿ ರವರು, 2012-13ನೇ ಸಾಲಿನ 13ನೇ ಹಣಕಾಸು – ನಾಗರೀಕ ಸೌಲಭ್ಯ ಯೋಜನೆ ಅಡಿ ಲಭ್ಯವಿರುವ ಹೆಚ್ಚುವರಿ ಉಳಿಕೆ ಅನುದಾನದಲ್ಲಿ ಪಂ.ರಾ.ಇಂ.ಉಪವಿಭಾಗ, ಸಿರಾ ವ್ಯಾಪ್ತಿಗೆ ರೂ.8.00ಲಕ್ಷ ಮೊತ್ತಕ್ಕೆ ತಯಾರಿಸಲಾಗಿರುವ 3ನೇ ಕಂತಿನ ಕ್ರಿಯಾ ಯೋಜನೆಯನ್ನು ಅನುಮೋದನೆಗಾಗಿ ಸಭೆಗೆ ಮಂಡಿಸಿದರು. ಮುಂದುವರೆದು, ಸರ್ಕಾರದ ಸುತ್ತೋಲೆ ಮತ್ತು ಮಾರ್ಗ ಸುಚಿಯಂತೆ ಕ್ರಿಯಾಯೋಜನೆಯನ್ನು ತಯಾರಿಸಲಾಗಿದೆ ಎಂದು ಸಭೆಗೆ ಸ್ಪಷ್ಟಪಡಿಸಿದರು.

**ಸದರಿ ಕ್ರಿಯಾ ಯೋಜನೆಯನ್ನು ಪರಿಶೀಲಿಸಿ, ಸಭೆಯು ಸರ್ವಾನುಮತದ ಅನುಮೋದನೆ ನೀಡಿತು.**

13. ಮಾನ್ಯ ಜಿ.ಪಂ. ಸದಸ್ಯರಾದ ಶ್ರೀ ಪಿ.ಆರ್. ಸುಧಾಕರ್ ಲಾಲ್ ರವರು ಮಾತನಾಡಿ, ಬೆಂಗಳೂರಿನ ಕಸ ತಂದು ಕೊರಟಗೆರೆ ತಾಲ್ಲೂಕಿನ ತೊಗರಿಘಟ್ಟದಲ್ಲಿ ಹಾಕಲು 600 ಎಕರೆ ಜಾಗ ಗುರುತಿಸಿರುವುದಾಗಿ ಬಿ.ಬಿ.ಎಂ.ಪಿ. ಆಯುಕ್ತರು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಪತ್ರ ಸಲ್ಲಿಸಿದ್ದಾರೆ. ಜನವಸತಿ ಇಲ್ಲವೆಂದು ಸುಳ್ಳು ಮಾಹಿತಿಯನ್ನು ನೀಡಿರುತ್ತಾರೆ. ಅದೇ ಜಾಗದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸುವುದಾಗಿ ಆಯುಕ್ತರು ಪತ್ರದಲ್ಲಿ ತಿಳಿಸಿದ್ದು, ಘಟಕ ಸ್ಥಾಪನೆಯಿಂದ ತೊಗರಿಘಟ್ಟ ಮಾತ್ರವಲ್ಲದೆ ಸುತ್ತ ಮುತ್ತಲಿನ 7-8 ಗ್ರಾಮಗಳಿಗೆ ತೊಂದರೆಯಾಗಲಿದೆ. ಇದನ್ನು ಎಲ್ಲಾ ಸದಸ್ಯರು ವಿರೋಧಿಸಿ ನಿರ್ಣಯ ಕೈಗೊಳ್ಳುವಂತೆ ಮನವಿ ಮಾಡುತ್ತಿದ್ದೇವೆ ಎಂದು ಸಭೆಗೆ ತಿಳಿಸಿದರು. ಇದಕ್ಕೆ ಎಲ್ಲಾ ಸದಸ್ಯರು ಸಹಮತ ವ್ಯಕ್ತಪಡಿಸಿ ನಮ್ಮ ಜಿಲ್ಲೆಯ ಕಸವನ್ನೇ ವಿಲೇವಾರಿ ಮಾಡಲು ಜಾಗ ಸಿಗುತ್ತಿಲ್ಲ. ಇನ್ನು ಬೇರೆ ಜಿಲ್ಲೆಯ ಕಸವನ್ನು ಇಲ್ಲಿಗೆ ತಂದು ಹಾಕಿಸಿಕೊಳ್ಳುವುದಾದರೂ ಹೇಗೆ? ಇದಕ್ಕೆ ಅವಕಾಶ ಕೊಡುವುದು ಬೇಡವೆಂದು ತಿಳಿಸಿದರು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರು ಮಾತನಾಡಿ, ಈ ಬಗ್ಗೆ ನಮಗೆ ಅಧಿಕೃತ ಜ್ಞಾಪನ ಪತ್ರ ಬಂದಿಲ್ಲವೆಂದು ಹೇಳಿ, ಬಂದ ನಂತರ ಈ ಬಗ್ಗೆ ಪರಿಶೀಲಿಸುತ್ತೇನೆಂದು ತಿಳಿಸಿ, ಲೋಕ್ ಅದಾಲತ್ ನಲ್ಲಿ ಜಿಲ್ಲೆಯ 51 ಗ್ರಾಮ ಪಂಚಾಯತಿಗಳಲ್ಲಿ ಘನತ್ಯಾಜ್ಯ

ವಿಲೇವಾರಿ ಘಟಕ ಸ್ಥಾಪನೆ ಸಂಬಂಧ ಪ್ರಮಾಣ ಪತ್ರ ಸಲ್ಲಿಸಿರುವುದಾಗಿ ಸಭೆಯ ಗಮನಕ್ಕೆ ತಂದರು.

**ಸಮಗ್ರ ಚರ್ಚೆಯ ನಂತರ ತೊಗರಿಘಟ್ಟದಲ್ಲಿ ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸುವುದನ್ನು ವಿರೋಧಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಸಭೆಯು ಸರ್ವಾನುಮತದ ನಿರ್ಣಯ ಕೈಗೊಂಡಿತು.**

ಚರ್ಚಿಸತಕ್ಕ ವಿಷಯಗಳು ಮುಕ್ತಾಯವಾದುದರಿಂದ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಿ/-
ಅಧ್ಯಕ್ಷರು,
ಜಿಲ್ಲಾ ಪಂಚಾಯತ್,
ತುಮಕೂರು.